ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 ಸಂಚಿಕೆ 13 ಮಾರ್ಚ್ 29, 1981 ಬೆಲೆ : 50 ಪೈಸೆ

ಮೀಸಲಾತಿ ವಿರೋದ

ಗುಜರಾತಿನಲ್ಲಿ ವೈದ್ಯಕೀಯ ಶಿಕ್ಷಣದಲ್ಲಿ ಮೀಸಲಾತಿ ಇರುವುದನ್ನು ವಿರೋಧಿಸಿ ಪ್ರಾರಂಭವಾದ ಚಳುವಳಿಯು ಮೀಸಲಾತಿ ಪದ್ಧತಿಯ ವಿರುದ್ಧ ಗುಜರಾತ್ ರಾಜ್ಯದಾದ್ಯಂತ ನಡೆಯುತ್ತಿದ್ದು ಇದೀಗ ಅದು ನಿಲ್ಲುವ ಲಕ್ಷಣಗಳು ಕಂಡುಬರುತ್ತಿವೆ. ಆದರೆ ಗುಜರಾತಿನಿಂದ ಸ್ಫೂರ್ತಿಪಡೆದೋ ಎಂಬಂತೆ ರಾಜಸ್ಥಾನದಲ್ಲೂ, ತಮಿಳುನಾಡಿನಲ್ಲೂ ಇದೇ ರೀತಿಯ ಚಳುವಳಿ ನಡೆಸುವ ಪ್ರಯತ್ನ ನಡೆದಿದೆ. ಹೈದರಾಬಾದಿನಲ್ಲಿ ಮೀಸಲಾತಿ ವಿರೋಧ ಮೆರವಣಿಗೆಕಾರರ ಮೇಲೆ ಲಾಠೀಚಾರ್ಜು ನಡೆದ ವರದಿಯಾಗಿದೆ. ಮೀಸಲಾತಿ ವಿರೋಧ ಚಳುವಳಿಯು ಒಂದಲ್ಲ ಒಂದು ರೀತಿಯಲ್ಲಿ ರಾಷ್ಟ್ರವ್ಯಾಪಿಯಾಗುವ ಅಪಾಯವೂ ಇದೆ.

ಗುಜರಾತಿನಲ್ಲಿ ನಡೆದ ಚಳುವಳಿಗೆ ಮೊದಲ ಹಂತದಲ್ಲಿ ಅಲ್ಲಿಯ ಭಾರತೀಯ ಜನತಾ ಪಾರ್ಟಿಯು ಬೆಂಬಲವಿತ್ತು. ಹಾಗೆಯೇ ರಾಜ್ಯದ ಕಾಂಗ್ರೆಸ್‌ನ ಒಳಜಗಳದಿಂದಲಾಗಿ ಕಾಂಗ್ರೆಸ್‌ನ ಒಂದು ಪ್ರಮುಖ ಗುಂಪಿನದ್ದೂ ಕೈವಾಡ ಇದೆ ಎಂಬುದಾಗಿ ವರದಿಯಾಗಿದೆ. ಆದರೆ, ರಾಷ್ಟ್ರೀಯ ಮಟ್ಟದಲ್ಲಿ ಎಲ್ಲಾ ರಾಜಕೀಯ ಪಕ್ಷಗಳೂ ಏಕಾಭಿಪ್ರಾಯದಿಂದ ಮೀಸ

ಸಂಪಾದಕೀಯ

ಲಾತಿಯನ್ನು ಬೆಂಬಲಿಸಿ, ಮೀಸಲಾತಿ ವಿರೋಧ ಚಳುವಳಿಯ ವಿರುದ್ಧದ ನಿಲುಮೆಯನ್ನು ತಳೆದಿರುವುದು ತುಂಬಾ ಸಂತಸದ ಸುದ್ದಿ. ಮಾತ್ರವೇ ಅಲ್ಲ, ಛಿದ್ರಕಾರಿ ಪರಿಣಾಮವಿರುವ ಈ ಚಳುವಳಿಯು ರಾಷ್ಟ್ರದ ಇತರೆಡೆಗಳಿಗೆ ಹರಡದಂತೆ ತಡೆಗಟ್ಟುವುದಕ್ಕೂ ಸಹಾಯಕವಾಗಬಲ್ಲದು.

ಭಾರತದೇಶದ ಸಮಾಜದಲ್ಲಿ ಜಗತ್ತಿನ ಬೇರಾವ ದೇಶಗಳಲ್ಲೂ ಇರದಷ್ಟು ವೈವಿಧ್ಯತೆ ಮತ್ತು ಜಟಿಲತೆಗಳಿವೆ. ಸಹಸ್ರಸಹಸ್ರ ವರ್ಷಗಳಿಂದ ಸಾಮಾಜಿಕವಾಗಿಯೂ, ಆರ್ಥಿಕವಾಗಿಯೂ ತುಳಿತಕ್ಕೊಳಗಾದ ಹಿಂದುಳಿದ ಜನತೆಯು ಸಾಂಸ್ಕೃತಿಕವಾಗಿಯೂ ಹಿಂದುಳಿಯುವಂತಾಗಿದೆ. ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯವಾಗಿ ಮುಂದುವರೆದಿರುವ ಮೇಲಿನ ವರ್ಗ ಮತ್ತು ಜಾತಿಯ ವಿಭಾಗಗಳ ಜನರು ಒಟ್ಟಾಗಿ ಇವರಿಗಿಂತ ತುಂಬಾ ಮುಂದಿದ್ದಾರೆ. ಸಾಂಸ್ಕೃತಿಕವಾಗಿಯೂ ಮುಂದುವರೆದಿದ್ದಾರೆ. ಈ ಪರಿಸ್ಥಿತಿಯಲ್ಲಿ ಮೀಸಲಾತಿಯಂತಹ ಪದ್ಧತಿ ಇಲ್ಲದೆ ಇದ್ದಲ್ಲಿ ವಿದ್ಯಾಭ್ಯಾಸದ ಸವಲತ್ತುಗಳಿಂದ ಮೊದಲ್ಗೊಂಡು ಉದ್ಯೋಗ ಮತ್ತು ಅಧಿಕಾರ ಎಲ್ಲವುಗಳನ್ನೂ ಮೇಲಿನ ವರ್ಗ ಮತ್ತು ಜಾತಿಯ ಜನರೇ ಗಿಟ್ಟಿಸಿಕೊಳ್ಳುವಂತಾಗುತ್ತದೆ. ಹಿಂದುಳಿದವರು ಇನ್ನೂ ಹಿಂದುಳಿಯುವಂತಾಗುತ್ತದೆ. ಇದು ಸರಿ ಇಲ್ಲ.

[ಕಡೇ ಪುಟ ನೋಡಿ]

ಫ್ಯಾಸಿಸ್ಟ್ ಕ್ರಮಗಳನ್ನು ತಡೆಗಟ್ಟಲು ಸಿ. ಪಿ. ಐ. (ಎಂ) ಕರೆ

ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಸರಕಾರಗಳು ಜನತೆಗೆ ಇತ್ತ ಭರವಸೆಗಳನ್ನು ಈಡೇರಿಸದೆ ಇರುವುದರಿಂದ ಮತ್ತು ಜನತೆಗೆ ತುರ್ತಿನ ತಾತ್ಕಾಲಿಕ ಪರಿಹಾರಗಳನ್ನು ಒದಗಿಸಿಕೊಡದಿರುವುದರಿಂದ, ಶ್ರಮಜೀವಿಗಳು ಮತ್ತು ಜನಸಾಮಾನ್ಯರು ಜೀವನ ಮಾಡುವುದೇ ಕಷ್ಟವಾಗಿದೆ. ಬಂಡವಾಳಶಾಹಿ ಮಾರ್ಗದಲ್ಲಿ ದೇಶವನ್ನು ಕೊಂಡೊಯ್ಯುತ್ತಲಿರುವ ಕಾಂಗ್ರೆಸ್ ಸರ್ಕಾರವು ಆರ್ಥಿಕ–ಸಾಮಾಜಿಕ ಬಿಕ್ಕಟ್ಟಿನ ಭಾರವನ್ನು ಶ್ರಮಜೀವಿಗಳ ಮೇಲೆ ಹೇರುತ್ತಿದೆ. ಕಾಂಗ್ರೆಸ್ ಸರಕಾರವು ಜನ ವಿರೋಧಿ, ಕಾರ್ಮಿಕ ವಿರೋಧಿ ಧೋರಣೆಗಳನ್ನು ಅನುಸರಿಸುತ್ತಿದೆ.

ಕಾಂಗ್ರೆಸ್ ಅಧಿಕಾರ ನಡೆಸುತ್ತಿರುವ ಕರ್ನಾಟಕ ರಾಜ್ಯದಲ್ಲಿ ಬಹಳ ಅಪಾಯಕಾರಿ ಪರಿಸ್ಥಿತಿಯು ಬೆಳವಣಿಗೆಯಾಗುತ್ತಿದೆ. ಯೋಜಿತ ಮತ್ತು ಕ್ರಮಬದ್ಧವಾಗಿ ವಾಕ್‌ಸ್ವಾತಂತ್ರ್ಯ ಹಾಗೂ ಪತ್ರಿಕಾ ಸ್ವಾತಂತ್ರ್ಯದ ಮೇಲೆ ಧಾಳಿ, ಕಾರ್ಮಿಕ ಸಂಘಟನೆಗಳ ಹಕ್ಕುಗಳು ಮತ್ತು ಕಾರ್ಮಿಕ ಸಂಘಟನೆಗಳು ತಮಗೆ ಬೇಕಾದವರನ್ನು ಮುಖಂಡರನ್ನಾಗಿ ಆರಿಸಿಕೊಳ್ಳಲು ಇರುವ ಹಕ್ಕುಗಳ ಮೇಲೆ ಧಾಳಿ ವಿರೋಧ ಪಕ್ಷಗಳ ಮೇಲೆ ಧಾಳಿ, ಕಾರ್ಮಿಕ ಸಂಘಟನೆ ಮತ್ತು ರಾಜಕೀಯ ಪಕ್ಷಗಳ ಕಛೇರಿಗೆ ಆಕ್ರಮಣ ಇತ್ಯಾದಿ ನಡೆಯುತ್ತಿದೆ.

ಮುಖ್ಯಮಂತ್ರಿಯವರು ಕೆಲವು ಪ್ರಮುಖ ಪತ್ರಿಕೆಗಳ ಮೇಲೆ ಹೊಗೆ ಕಾರುತ್ತಿರುವುದು, ರಾಜ್ಯದ ಕೆಲವು ಪ್ರಮುಖ ಪತ್ರಿಕೆಗಳ ಕಛೇರಿಗಳ ಮೇಲೆ ಧಾಳಿ ನಡೆಸಿರುವುದು, ಖ್ಯಾತ ಬರಹಗಾರ ಹಾಗೂ ಸಂಪಾದಕ ಶ್ರೀ ಲಂಕೇಶ್ ಅವರ ಮೇಲೆ ಧಾಳಿ, ಕುದುರೆಮುಖದ ಎಚ್.ಎಸ್.ಸಿ.ಎಲ್. ಕಾರ್ಮಿಕರು ಮತ್ತು ರೋಸ್‌ಡೇಲ್ ಕಾಫಿ ತೋಟ ಕಾರ್ಮಿಕರ ಮೇಲೆ ಮತ್ತು ಇನ್ನೂ ಹಲವೆಡೆಗಳಲ್ಲಿ ಕಾರ್ಮಿಕರ ಮೇಲೆ ಪೋಲೀಸರು ನಡೆಸಿದ ದೌರ್ಜನ್ಯ, ಸಾರ್ವಜನಿಕರ ಕ್ಷೇತ್ರದ ಕಾರ್ಮಿಕರು ಮುಷ್ಕರ ನಡೆಸುತ್ತಿರುವ ಸಂದರ್ಭದಲ್ಲಿ ಮುಷ್ಕರ ಮುರಿಯುವ ತಂತ್ರಗಳು ಮತ್ತು ಖ್ಯಾತ ಕಾರ್ಮಿಕ ಮುಂದಾಳು ಶ್ರೀ ಡಿ. ರಾಜ್‌ಗೋಪಾಲ್ ಅವರೂ ಸೇರಿದಂತೆ ಹಲವರ ಮೇಲೆ ನಡೆದಿರುವ ಗೂಂಡಾಧಾಳಿ, ಹತ್ತಿಗಿರಣಿ ಕಾರ್ಮಿಕ ಮುಖಂಡ ಮುನಿಸ್ವಾಮಿ ಮತ್ತಿತರರ ಮೇಲೆ ನಡೆದ ಧಾಳಿ,

[ಕಡೇ ಪುಟ ನೋಡಿ]

ಚರಿತ್ರಾರ್ಹ ಪ್ರಥಮ ಮಹಿಳಾ ಸಮ್ಮೇಳನ

ರಾಷ್ಟ್ರದ ವಿವಿಧ ರಾಜ್ಯಗಳಲ್ಲಿ ನಡೆಯುತ್ತಿರುವ ಪ್ರಗತಿಪರ ಮಹಿಳಾ ಚಟುವಟಿಕೆಗಳಿಗೆ ಒಂದು ರಾಷ್ಟ್ರೀಯ ಮಟ್ಟದ ವಿಶಾಲ ಸಂಘಟನಾ ಸ್ವರೂಪ ಕೊಡುವ ಪ್ರಯತ್ನವಾಗಿ ಮದ್ರಾಸಿನಲ್ಲಿ ಮಾರ್ಚ್ 10, 11, 12ರಂದು ಮೊದಲ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮಹಿಳಾ ಸಂಘದ ಸಮ್ಮೇಳನ ನಡೆಯಿತು. ರಾಷ್ಟ್ರದ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಮಹಿಳೆಯ ಸ್ಥಿತಿಗತಿಗಳನ್ನು ಕುರಿತಾದ ಚರ್ಚೆ ಮತ್ತು ಸಮ್ಮೇಳನದಲ್ಲಿ ತೆಗೆದುಕೊಂಡ ನಿರ್ಣಯಗಳ ವರದಿ ಇಲ್ಲಿದೆ.

ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಹೋರಾಟಕ್ಕಾಗಿ ಶ್ರಮಿಸಿದ ಹುತಾತ್ಮರಿಗೆ ಗೌರವ ಸಲ್ಲಿಸುವ ವಿಧಿಯೊಂದಿಗೆ ಸಮ್ಮೇಳನದ ಕಾರ್ಯಕ್ರಮ ಪ್ರಾರಂಭವಾಯಿತು. ರೈತ-ಕಾರ್ಮಿಕರು ಒಟ್ಟಾರೆ ದುಡಿಮೆಗಾರರು ಶೋಷಕ ಶಕ್ತಿಗಳ ವಿರುದ್ಧ ನಡೆಸಿರುವ ಹೋರಾಟದಲ್ಲಿನ ಹೋರಾಟಗಾರರ ಬಲಿದಾನವನ್ನು ಗೌರವಿಸಿ, ಅವರು ಸಾಧಿಸಲು ಕೈಗೊಂಡ ಮಹೋನ್ನತ ಕಾರ್ಯಗಳನ್ನು ಪೂರ್ಣಗೊಳಿಸುವ ಪ್ರತಿಜ್ಞೆಯನ್ನು ಈ ಸಮ್ಮೇಳನ ತೆಗೆದುಕೊಂಡು ಆ ಹುತಾತ್ಮರ ನೆನಪಿನಲ್ಲಿ ಈ ಸಮ್ಮೇಳನ ತನ್ನ ಧ್ವಜವನ್ನು ನೆಟ್ಟಿತು.

ತಮಿಳು ಮತ್ತು ಬೆಂಗಾಲಿಯ ಕ್ರಾಂತಿಕಾರಿ ಗೀತೆಗಳೊಂದಿಗೆ ಸಮ್ಮೇಳನದ ಕಾರ್ಯಕ್ರಮ ಪ್ರಾರಂಭವಾಯಿತು. ಮೊದಲಿಗೆ ಪ್ರೆಸಿಡಿಯಮ್‌ನ ಚುನಾವಣೆ ನಡೆದು ಕಾಂ. ಕನಕ್ ಮುಖರ್ಜಿ, ಕಾಂ. ಕ್ಯಾಪ್ಟನ್ ಲಕ್ಷ್ಮಿ, ಕಾಂ. ಸ್ವರಾಜ್ಯಂ, ಕಾಂ. ಶಾರದಾ ವಿ. ಗೋವಿಂದರಾಜ್, ಕಾಂ. ಮಂಗಳೇಶ್ವರಿ ಮತ್ತು ಕಾಂ. ಇಳಾ ಭಟ್ಟಾಚಾರ್ಯ-ಇವರುಗಳು ಆಯ್ಕೆಯಾದರು.

ನಂತರ ಸ್ವಾಗತ ಭಾಷಣ ಮಾಡಿದ ರಿಸೆಪ್ಷನ್ ಕಮಿಟಿಯ ಚೇರ್ಮನ್ ಕಾಂ. ಜಾನಕಿಯಮ್ಮ ಅವರು, ಸಮ್ಮೇಳನ ನಡೆಯುತ್ತಿರುವ ಈ ಸಮಯದಲ್ಲಿನ ರಾಷ್ಟ್ರದ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಪರಿಚಯ ಮಾಡಿಕೊಟ್ಟು, ಎಲ್ಲಾ ರಾಜ್ಯದಿಂದ ಬಂದ ಪ್ರತಿನಿಧಿಗಳಿಗೂ ಹಾರ್ದಿಕ ಸ್ವಾಗತ ಕೋರಿದರು.

ಸಮ್ಮೇಳನವನ್ನು ಉದ್ಘಾಟಿಸಿದ ಡಾ॥ ವೀಣಾ ಮಜುಂದಾರ್‌ರವರು ತಮ್ಮ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ಪ್ರಜ್ಞಾವಂತರಾದ ಮಹಿಳೆಯರು ರಾಷ್ಟ್ರದ ಎಲ್ಲೆಡೆಗಳಿಂದಲೂ ಬಂದು ಪ್ರಜಾಸತ್ತಾತ್ಮಕವಾದ ಮತ್ತು ಶೋಷಣಾರಹಿತವಾದ ಹೊಸ ಸಮಾಜದ ನಿರ್ಮಾಣ ಮಾಡಲು ಹೊಸ ಸಂಘ ರೂಪಿಸುತ್ತಿರುವ ಈ ದಿನ ಚರಿತ್ರಾರ್ಹವಾದದ್ದು ಎಂದರು. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಮತ್ತು ಇಂದು ಭಾರತದಲ್ಲಿ ನಡೆಯುತ್ತಿರುವ ಮಹಿಳಾ ಚಳುವಳಿಗಳನ್ನು ತೌಲನಿಕವಾಗಿ ವಿಶ್ಲೇಷಿಸಿದರು. ಇಂದು ಮಹಿಳಾ ಚಳುವಳಿಯು ದುಡಿಯುವ ಮಹಿಳೆಯ ಶಕ್ತಿ ಸಾಮರ್ಥ್ಯಗಳ ಮೇಲೆ ಸ್ಪಷ್ಟವಾಗಿ ಆಧಾರಿತವಾಗಿರಬೇಕು. ಹೋರಾಟಕ್ಕೆ ಅವಶ್ಯಕವಾಗಿ ಬೇಕಾಗುವ ಸ್ಪಷ್ಟ ತಿಳುವಳಿಕೆ ಮತ್ತು ಸಲಕರಣೆಗಳನ್ನು ಹೊಂದಿರುವ ವಿದ್ಯಾವಂತ ಮಹಿಳೆಯರು ಸಮಾಜದ ಸ್ತ್ರೀ-ಪುರುಷರಿಬ್ಬರ ವಿಮೋಚನೆಗೆ ಅಡ್ಡಿಯಾಗಬಹುದಾದಂತಹ ಭ್ರಮಾತ್ಮಕ ಸ್ಥಿತಿಯನ್ನು ಬದಲಾಯಿಸಲು ಮುಂದಾಗಬೇಕು. ಇದಕ್ಕೆ ರಾಷ್ಟ್ರಾದ್ಯಂತ ದೊರೆಯುವ ದುಡಿಯುವ ಮಹಿಳೆಯರ ಶ್ರೀಮಂತ ಅನುಭವವನ್ನು ಬಳಸಿಕೊಳ್ಳಬೇಕು. ಇಂದು ಮಹಿಳಾ ಸಂಘಟನೆಗಳು ಮಾಡಬೇಕಾಗಿರುವ ಮುಖ್ಯ ಕೆಲಸವೆಂದರೆ, ಎಲ್ಲಾ ಮಹಿಳೆಯರಿಗೂ ತಮ್ಮ ಮತ ಚಲಾಯಿಸುವ ಹಕ್ಕಿನ ಬಗ್ಗೆ ಪ್ರಜ್ಞಾವಂತರಾಗಿರುವಂತೆ ಮಾಡಬೇಕಾದ್ದು ಮತ್ತು ಯಾರಿಗೆ ಮತ ಹಾಕಿದರೆ ನಾವು ಇಚ್ಛಿಸುವಂತೆ ರಾಜಕೀಯ ರಚನೆಯನ್ನು ಬದಲಾಯಿಸಬಲ್ಲೆವು ಎಂಬುದನ್ನು ತೋರಿಸಬೇಕಾಗಿದೆ. ಭಾರತದ ವೈವಿಧ್ಯಮಯತೆಯನ್ನು ಮರೆತು ಯಾವುದೋ ಒಂದು ನಿರ್ದಿಷ್ಟ ಜನಜೀವನವನ್ನು 'ಭಾರತದ ಸಂಸ್ಕೃತಿ' ಎನ್ನುವುದು ತಪ್ಪಾಗುತ್ತದೆ. ಆದ್ದರಿಂದ ಆದಿವಾಸಿಗಳ, ಕೃಷಿ ಕಾರ್ಮಿಕ ಮಹಿಳೆಯರ ದಿನನಿತ್ಯದ ಜೀವನದ ಹೋರಾಟದಲ್ಲಿ ಕಂಡು ಬರುವ ಸಂಗತಿಗಳಿಂದ ನಮ್ಮ ಮಹಿಳಾ ಚಳುವಳಿಗಳು ಸ್ಫೂರ್ತಿ ಪಡೆಯಬೇಕಾಗಿದೆ ಮತ್ತು ಧ್ಯೇಯೋದ್ದೇಶಗಳನ್ನು ರೂಪಿಸಿಕೊಳ್ಳಬೇಕಾಗಿದೆ- ಎಂದು ಅತ್ಯಂತ ವಿಶ್ಲೇಷಣಾತ್ಮಕವಾದ, ವಿಚಾರಾತ್ಮಕವಾದ ಹಾಗೂ ಉಪಯುಕ್ತ ಭಾಷಣ ಮಾಡಿದ ವೀಣಾ ಮಜುಂದಾರ್‌ರವರು ಸಮಾಜದಲ್ಲಿ ಮಹಿಳೆಯರ ಬಗೆಗಿರುವ ಎಲ್ಲಾ ಭ್ರಮಾತ್ಮಕ ಆಲೋಚನೆಗಳನ್ನು ಮುರಿದು ಆತ್ಮವಿಶ್ವಾಸದಿಂದ ಮಹಿಳಾ ಸಂಘಟನೆ ಮಾಡಲು ಮಹಿಳೆಯರಿಗೆ ಕರೆಯಿತ್ತರು.

ಕಾಂ. ಅಹಲ್ಯಾ ರಂಗಣೇಕರ್‌ರವರು 'ಸಿದ್ಧತಾ ಸಮಿತಿ'ಯ

[ಕಡೇ ಪುಟನೋಡಿ]

ಸ್ವಾತಂತ್ರ್ಯ ಸಂಗ್ರಾಮದ ಅಪ್ರತಿಮ ಸೇನಾನಿ

ಶಹೀದ್ ಚಂದ್ರಶೇಖರ್ ಆಜಾದ್

—ವಿ. ಪಿ. ಕುಲಕರ್ಣಿ

ಫೆಬ್ರವರಿ 27, 1981ಕ್ಕೆ ಅಮರ ಕ್ರಾಂತಿಕಾರಿ, ಸ್ವಾತಂತ್ರ್ಯ ಸಂಗ್ರಾಮದ ಅಪ್ರತಿಮ ಸೇನಾನಿ ಚಂದ್ರಶೇಖರ ಆಜಾದ್‌ರು ಹುತಾತ್ಮರಾಗಿ ಐವತ್ತು ವರ್ಷಗಳಾದವು. ಆ ಮಹಾ ಪುರುಷನ ತ್ಯಾಗ, ಧೈರ್ಯ, ಉತ್ಸಾಹ ಇವುಗಳು ನೂರಾರು, ಸಹಸ್ರಾರು ಯುವಕರ ಮನಃಸೂರೆಗೊಂಡಿದ್ದವು. ಈ ಅತ್ಯುತ್ಕೃಷ್ಟ ಸ್ವಾತಂತ್ರ್ಯ ಹೋರಾಟಗಾರನ ಸಂಕ್ಷಿಪ್ತ ಪರಿಚಯ ಈ ಲೇಖನದ ಉದ್ದೇಶ.

1928 ನವೆಂಬರ್ ತಿಂಗಳು. ಸ್ಯಾಂಡರ್ಸ್‌ನ ಲಾಠೀ ಪೆಟ್ಟುಗಳಿಂದಾದ ಮರಣಾಂತಿಕ ಗಾಯಗಳಿಂದಾಗಿ ನವೆಂಬರ್ 17ರಂದು ಪಂಜಾಬ್ ಕೇಸರಿ ಲಾಲಾಲಜಪತರಾಯರು ಮರಣ ಹೊಂದಿದ್ದರು. ಈ ಘಟನೆ ನಡೆದು ಕೆಲವೇ ದಿನಗಳ ನಂತರ ಲಾಹೋರಿನಲ್ಲಿ ಮರಣದ ನಿಮಿತ್ತ ನಡೆದ ಸಂತಾಪಸೂಚಕ ಸಭೆಯಲ್ಲಿ ಮಾತನಾಡಿದ ದೇಶಬಂಧು ಚಿತ್ತರಂಜನ್‌ದಾಸರ ಪತ್ನಿ ಬಸಂತಿ ದೇವಿ ಸಭೆಯನ್ನು ಉದ್ದೇಶಿಸಿ, "ಈ ದೇಶದಲ್ಲಿ ಪುರುಷತ್ವ ಮತ್ತು ಯೌವ್ವನ ಜೀವಂತವಾಗಿದೆಯೇನು? ಪುರುಷತ್ವ ಮತ್ತು ಯೌವ್ವನಗಳಿಗೆ ಈ ದುರಂತದಿಂದ ಲಜ್ಜೆ ಮತ್ತು ಅಪಮಾನಗಳ ಅನುಭವವಾಗುತ್ತಿದೆಯೇನು? ನಾನು ಭಾರತದ ಒಬ್ಬ ಸ್ತ್ರೀಯಾಗಿ ಇದಕ್ಕೆ ಉತ್ತರ ಬಯಸುತ್ತೇನೆ. ನಮ್ಮ ಪ್ರೀತಿಯ ಲಾಲಾಜಿಯರ ಚಿತೆಯ ಅಗ್ನಿ ತಣ್ಣಗಾಗುವ ಮೊದಲೇ ಭಾರತದ ಪುರುಷತ್ವ ಮತ್ತು ಯುವಜನಾಂಗ ಇದಕ್ಕೆ ಉತ್ತರ ನೀಡಬೇಕು"!

ಬಸಂತಿದೇವಿಯ ಈ ಸವಾಲನ್ನೆದುರಿಸಿ ಕ್ರಾಂತಿಕಾರಿಗಳ ತಂಡವೊಂದು ಲಾಲಾಜಿ ಮರಣಹೊಂದಿದ ಒಂದು ತಿಂಗಳಿಗೆ (ಡಿಸೆಂಬರ್ 17, 1928) ಸರಿಯಾಗಿ ಮದೋನ್ಮತ್ತ ಸಾಮ್ರಾಜ್ಯಶಾಹಿ ಕುನ್ನಿ ಸ್ಯಾಂಡರ್ಸ್‌ನನ್ನು ವಧಿಸಿತು. ಈ ಕ್ರಾಂತಿಕಾರಿ ಸಂಸ್ಥೆಯ ಹೆಸರು "ಹಿಂದೂಸ್ತಾನ್ ಸೋಷಲಿಸ್ಟ್ ರಿಪಬ್ಲಿಕನ್ ಆರ್ಮಿ" (ಎಚ್.ಎಸ್.ಆರ್.ಎ) ಇದರ ಪ್ರಧಾನ ದಂಡನಾಯಕ ಚಂದ್ರಶೇಖರ ಆಜಾದ್.

1919-20ರ ಸುಮಾರಿಗೆ ಕಾಂಗ್ರೆಸ್‌ನ ನೇತೃತ್ವ ಗಾಂಧೀಯವರ ಕೈಗೆ ಬಂದಿತು. ಜಾಲಿಯನ್‌ವಾಲಾಬಾಗ್ ದುರಂತ ಜನತೆಯ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿತ್ತು. ಸೇಡಿಗಾಗಿ ಹಂಬಲಿಸುತ್ತಿತ್ತು. ಜನತೆ ಹೊಸ ಹೋರಾಟವನ್ನು ಅಪೇಕ್ಷಿಸುತ್ತಿತ್ತು. ಗಾಂಧೀ 'ಅಸಹಕಾರ ಚಳುವಳಿ' ಎಂಬ ಕಾರ್ಯಕ್ರಮವನ್ನು ಜನತೆಯ ಮುಂದಿಟ್ಟರು. ಸರಕಾರದೊಟ್ಟಿಗೆ ಅಸಹಕಾರ ಈ ಚಳುವಳಿಯ ಉದ್ದೇಶ. ಈ ಕಾರ್ಯಕ್ರಮದ ಒಂದಂಗವಾಗಿ ವಿದ್ಯಾರ್ಥಿಗಳು ಶಾಲೆ-ಕಾಲೇಜುಗಳನ್ನು ತೊರೆದು ಹೊರಬಂದರು. ಅಸಹಕಾರ ಚಳುವಳಿಯ ಸಿದ್ಧತೆಗಳು ಭಾರತದ ಮೂಲೆಮೂಲೆಗಳಲ್ಲಿ ಬಿರುಸಾಗಿ ನಡೆಯುತ್ತಿದ್ದವು. ದೇಶದ ತುಂಬೆಲ್ಲ ಉತ್ಸಾಹದ ವಾತಾವರಣ ತುಂಬಿತ್ತು.

1921 ಡಿಸೆಂಬರ್ 26ರಂದು ಕಾಶಿಯಲ್ಲಿ ದೊಡ್ಡ ಮೆರವಣಿಗೆ ಹೊರಡಿಸಲಾಗಿತ್ತು. ಬ್ರಿಟಿಷ್ ಸರಕಾರದ ವಿರುದ್ಧ ಪ್ರತಿಭಟಿಸುವುದು ಈ ಮೆರವಣಿಗೆಯ ಉದ್ದೇಶ. ಡಾ|| ಸಂಪೂರ್ಣಾನಂದ, ಬಾಬುಶಿವಪ್ರಸಾದ್‌ಗುಪ್ತ ಮೊದಲಾದವರು ನೇತೃತ್ವವಹಿಸಿದ್ದರು. ಮೆರವಣಿಗೆಯಲ್ಲಿದ್ದ ಸಾವಿರಾರು ಜನರು 'ವಂದೇ ಮಾತರಂ', 'ಬ್ರಿಟಿಷ್ ಸತ್ತೆ ನಾಶವಾಗಲಿ' ಎಂದು ಘೋಷಿಸುತ್ತಿದ್ದರು. ಪೋಲೀಸ್ ಪಡೆ ಧಾವಿಸಿಬಂದಿತು. ಲಾಠೀ ಪ್ರಹಾರವಾಯಿತು. ಬಂಧನಗಳಾದವು. ಸಂಸ್ಕೃತ ಪಾಠ ಶಾಲೆಯ ವಿದ್ಯಾರ್ಥಿ ಚಂದ್ರಶೇಖರರೂ ಈ ಬಂಧಿತರಲ್ಲಿ ಒಬ್ಬರು.

ಡಿಸೆಂಬರ್ 27ರಂದು ನ್ಯಾಯಾಧೀಶ ಖರೇಘಾಟ್ ಎಂಬವನೆದಿರು ಬಂಧಿತರನ್ನು ಹಾಜರಪಡಿಸಲಾಯಿತು. "ನಾವು ಜಾಲಿಯನ್‌ವಾಲಾ ಬಾಗ್ ದುರಂತವನ್ನು ಪ್ರತಿಭಟಿಸುತ್ತೇವೆ". "ನಿಮ್ಮ ಕೋರ್ಟನ್ನು ನಾವು ಮಾನ್ಯಮಾಡುವುದಿಲ್ಲ" ಎಂದು ಬಂಧಿತರು ಹೇಳಿಕೆ ನೀಡಿದರು. ಚಂದ್ರಶೇಖರರನ್ನೂ ಮ್ಯಾಜಿಸ್ಟ್ರೇಟ್‌ನ ಎದುರು ಹಾಜರಪಡಿಸಿ, ಕೈಕೋಳ ಧರಿಸಿದ ಆತನನ್ನು ಕಟಕಟೆಗೆ ತಂದರು. ಖರೇಘಾಟ್ ಕರ್ಕಶ ಸ್ವರದಿಂದ ಘರ್ಜಿಸಿದ: ನಿನ್ನ ಹೆಸರೇನು? ನನ್ನ ಹೆಸರು ಆಜಾದ್ ಎಂದು ಚಂದ್ರಶೇಖರ ಅಬ್ಬರಿಸಿದ. ಯಾರೋ ಚಪ್ಪಾಳೆ ತಟ್ಟಿದರು. ವಕೀಲರುಗಳೂ ಹರ್ಷದಲ್ಲಿ ಪಾಲ್ಗೊಂಡರು. ಮ್ಯಾಜಿಸ್ಟ್ರೇಟ್ ತನಗಾದ ಅಪಮಾನ ನುಂಗಿ ಮತ್ತೆ ಪ್ರಶ್ನಿಸಿದ 'ನಿನ್ನ ಅಪ್ಪನ ಹೆಸರೇನು'? ಅಪ್ಪನ ಹೆಸರು 'ಸ್ವಾಧೀನತೆ' ಎಂದು ಚಂದ್ರಶೇಖರ ಉತ್ತರಿಸಿದ. ತಾಳ್ಮೆ ತಪ್ಪಿದ ಖರೇಘಾಟ್ 'ನಿನ್ನ ಮನೆ ಎಲ್ಲಿ'? ಎಂದು ಪ್ರಶ್ನಿಸಿದ. 'ಜೈಲು ನನ್ನ ಮನೆ' ಎಂದು ಹುಡುಗ ಉತ್ತರಿಸಿದ.

ದುರಹಂಕಾರಿ ಖರೇಘಾಟ್‌ನ ಕೊಬ್ಬು ಇಳಿಸಿದ್ದಕ್ಕೆ ಜನ ಮೆಚ್ಚುಗೆಯ ದೃಷ್ಟಿಯಿಂದ ನೋಡುತ್ತಿದ್ದರು. ಆಳರಸರ ವಿರುದ್ಧ ಹೋರಾಟ ಹೂಡಿದ್ದಕ್ಕಾಗಿ ಈ ಉದ್ಧಟ ಬಾಲಕನಿಗೆ ಹದಿನಾರು ಛಡಿ ಏಟುಗಳ ಶಿಕ್ಷೆ ವಿಧಿಸಲಾಗಿದೆ ಎಂದು ನ್ಯಾಯಾಧೀಶ ತೀರ್ಪಿತ್ತ.

ವಾರಣಾಸಿಯ ಸೆಂಟ್ರಲ್ ಜೈಲಿನಲ್ಲಿ ಚಂದ್ರಶೇಖರನಿಗೆ ಶಿಕ್ಷೆ ಜಾರಿಮಾಡಲಾಯಿತು. ನಾಲ್ಕು ದಿನ ನೀರಿನಲ್ಲಿ ನೆನೆಇಟ್ಟ ಛಡಿಯಿಂದ ಅವನನ್ನು ಥಳಿಸಲಾಯಿತು. ತನ್ನ ಪೃಷ್ಠಗಳ ಮೇಲೆ ಬೀಳುತ್ತಿದ್ದ ಪ್ರತಿಪೆಟ್ಟಿಗೂ 'ಮಹಾತ್ಮಾ ಗಾಂಧೀ ಕೀ ಜೈ' 'ಭಾರತ ಮಾತಾ ಕೀ ಜೈ' ಎಂದು ಘೋಷಣೆ ಕೂಗುತ್ತಾ ಅನುಭವಿಸುತ್ತಿದ್ದ. ಭೀಕರ ನರಕ ಯಾತನೆಗೆ ಹುಡುಗ ಜಗ್ಗಲಿಲ್ಲ. ಮಾಂಸ ಕಿತ್ತುಬಂದು ರಕ್ತ ತೊಟ್ಟಿಕ್ಕುತ್ತಿತ್ತು. ಹುಡುಗ 'ವಂದೇ ಮಾತರಂ' ಎಂದು ಆರ್ಭಟಿಸುತ್ತಲೇ ಇದ್ದ. ಹದಿನಾರು ಛಡಿಏಟು ಶಿಕ್ಷೆ ಅನುಭವಿಸಿದ.

ಮರುದಿನ ಕಾಶಿಯ ಜನತೆ ಈ ಧೀರ ಬಾಲಕನಿಗೆ ಸನ್ಮಾನಮಾಡಲು ನಿರ್ಧರಿಸಿದರು. ಜ್ಞಾನವಾಪಿ ಮೊಹಲ್ಲೆಯಲ್ಲಿ ಸಾರ್ವಜನಿಕ ಸಭೆ



ಏರ್ಪಡಿಸಲಾಯಿತು. ಸಮಾವೇಶಗೊಂಡಿದ್ದ ವಿಶಾಲ ಜನಸ್ತೋಮ ಬಾಲಕನ ಧೈರ್ಯ-ಸ್ಥೈರ್ಯಗಳಿಗೆ ಅಭಿನಂದಿಸಿದರು. ಚಂದ್ರಶೇಖರನೂ ನಾಲ್ಕು ಮಾತುಗಳನ್ನಾಡಿದ. ಇದೇ ಅವನ ಪ್ರಥಮ ಹಾಗೂ ಕೊನೆಯ ಸಾರ್ವಜನಿಕ ಭಾಷಣ. ಮಹಾತ್ಮಾ ಗಾಂಧೀ ಕೀ ಜೈ ಎಂದು ಛಡೀಪೆಟ್ಟು ಅನುಭವಿಸಿದ ಬಾಲಕ ಚಂದ್ರಶೇಖರ ತಿವಾರಿ ಮುಂದೆ ಚಂದ್ರಶೇಖರ ಆಜಾದ್ ಎಂದು ಪರಿಚಿತನಾದ. ಇದೇ ಬಾಲಕ ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಕ್ರಾಂತಿಕಾರಿಗಳಲ್ಲಿ ಪ್ರಥಮ ಪಂಕ್ತಿಯಲ್ಲಿ ವಿರಾಜಮಾನವಾದ.

1906ರಲ್ಲಿ ಮಧ್ಯಪ್ರದೇಶದ 'ಬಾವರಾ' ಎಂಬ ಗ್ರಾಮದಲ್ಲಿ ಚಂದ್ರಶೇಖರ ಆಜಾದ್‌ರು ಜನ್ಮತಾಳಿದರು. ತಂದೆ ಸೀತಾರಾಂ ತಿವಾರಿ. ತಾಯಿ ಜಗದೇವಿರಾಣಿ.

ಅಸಹಕಾರ ಚಳುವಳಿ ದೇಶದಲ್ಲಿ ಹೊಸ ಅಲೆ ಎಬ್ಬಿಸಿತು. ಇಡೀ ದೇಶ ಮಹಾತ್ಮರ ಕರೆಗೆ ಓಗೊಟ್ಟಿತ್ತು. ಅಷ್ಟರಲ್ಲಿ ಚೌರಿಚೌರಾ ಘಟನೆ ಸಂಭವಿಸಿತು. ಗಾಂಧೀ ಚಳುವಳಿಯನ್ನು ವಾಪಸ್ಸು ಪಡೆದರು.

1922, ಫೆಬ್ರವರಿ 5 ರಂದು ಚೌರಿಚೌರಾ (ಯು.ಪಿ.) ಎಂಬಲ್ಲಿ ಪೋಲೀಸರು ಗುಂಡು ಹೊಡೆದು ನಿರಪರಾಧಿಗಳಾದ ನಜರ್ ಆಲಿ, ಖೇಲ್‌ವಾನ್ ಭಾರ್ ಮತ್ತು ಭಗವಾನ್ ತೇಲಿ ಎಂಬ ಮೂವರನ್ನು ಕೊಂದರು. ಅನೇಕ ಜನ ಗಾಯಗೊಂಡರು. ತಮ್ಮ ಮದ್ದುಗುಂಡು ಖಾಲಿಯಾಗುವವರೆಗೂ ಪೋಲೀಸರು ಗುಂಡು ಹಾರಿಸಿದರು. ನಂತರ ಓಡಿಹೋಗಿ ಪೋಲೀಸ್ ಸ್ಟೇಷನ್‌ನಲ್ಲಿ ಅವಿತುಕೊಂಡಿದ್ದರು. ರೊಚ್ಚಿಗೆದ್ದ ಜನತೆ ಅವರನ್ನು ಹೊರಕ್ಕೆ ಕೂಗಿತು. ಅವರು ತಿರಸ್ಕರಿಸಿದಾಗ ಜನರು ಪೋಲೀಸ್ ಸ್ಟೇಷನ್‌ಗೇ ಬೆಂಕಿ ಇಟ್ಟರು. ಸುಮಾರು 23 ಜನ ಪೋಲೀಸರು ನಿಧನರಾದರು.

ಕಾಂಗ್ರೆಸ್ ಇತಿಹಾಸಕಾರ ಸೀತಾರಾಮಯ್ಯನಂತವರು ಚೌರಿಚೌರಾ ಘಟನೆಯಲ್ಲಿ ಪೋಲೀಸರು ಗುಂಡು ಹಾರಿಸಿದ್ದನ್ನೂ, ಕನಿಷ್ಟ ಮೂರು ಜನ ನಿಧನರಾದುದನ್ನೂ ಗಮನಕ್ಕೇ ತೆಗೆದುಕೊಂಡಿಲ್ಲವೆಂದು ಗಮನಿಸಬೇಕು. ಚೌರಿಚೌರಾ ಘಟನೆಯ ಪ್ರತ್ಯಕ್ಷದರ್ಶಿಯಾಗಿ ಬದುಕುಳಿದಿದ್ದ ದ್ವಾರಕಾನಾಥ ಪಾಂಡೆ ಎಂಬುವರನ್ನು ಮನ್ಮಥನಾಥ ಗುಪ್ತ (ಸುಪ್ರಸಿದ್ಧ ಕ್ರಾಂತಿಕಾರಿ)ರು 1978ರಲ್ಲಿ ಭೇಟಿಯಾಗಿ ವಿಚಾರಿಸಿದಾಗ ಚೌರಿಚೌರಾ ಘಟನೆಯಲ್ಲಿ ಕನಿಷ್ಠ 26 ಜನರು ಪೋಲೀಸರ ಗುಂಡೇಟುಗಳಿಂದ ಸತ್ತಿರಬಹುದೆಂದು ತಿಳಿಸಿದ್ದಾರೆ.

ಅಂತೂ ಅಸಹಕಾರ ಚಳುವಳಿಯ ವಾಪಸಾತಿಯಿಂದಾಗಿ ಎಲ್ಲೆಡೆ ಅಸಮಾಧಾನ ಉಂಟಾಯಿತು. ಗಾಂಧೀಜಿಯವರೊಬ್ಬರ ಹೊರತಾಗಿ ಗಾಂಧೀಜಿಯ ಈ ಕ್ರಮ ಎಲ್ಲ ಕಾಂಗ್ರೆಸ್ಸಿಗರನ್ನೂ ನಿರಾಶೆಗೊಳಿಸಿತು. ನಮ್ಮ ಆಸೆಗಳು ನುಚ್ಚುನೂರಾದವು. ಒಂದು ಘಟನೆಯ ಅನಿವಾರ್ಯ ಪರಿಣಾಮದಿಂದ ಈ ನಿರ್ಣಯ ಹುಟ್ಟಿಕೊಂಡಿದ್ದಾದರೆ, ನಮ್ಮ ಅಹಿಂಸಾತ್ಮಕ ಚಳುವಳಿಯ ಸಿದ್ಧಾಂತ ಮತ್ತು ಪ್ರಯೋಗ ತಂತ್ರದಲ್ಲೇ ಏನೋ ಕೊರತೆ ಇದೆ...... ಪೋಲೀಸರ ಅತ್ಯಂತ ಉದ್ರೇಕಕಾರಿ ನಡುವಳಿಕೆಯ ಮುಂದೆ ಸಂಪೂರ್ಣ ಶಾಂತವಾಗಿಯೇ ಇರಬಲ್ಲೆವೆಂದು ನಮ್ಮಲ್ಲಿ ಎಷ್ಟು ಜನ ಎದೆ ಮುಟ್ಟಿ ಹೇಳಬಲ್ಲರು?" ಎಂದು ಜವಾಹರಲಾಲ್ ನೆಹರೂ ತಮ್ಮ ಆತ್ಮ ಚರಿತ್ರೆಯಲ್ಲಿ ಈ ಘಟನೆಯನ್ನು ಪ್ರಸ್ತಾಪಿಸಿದ್ದಾರೆ.

ಈ ಸಂದರ್ಭದಲ್ಲಿ ಚಂದ್ರಶೇಖರ ಆಜಾದ್‌ರು ಅಸಹನೆಗೊಂಡ ಲಕ್ಷಾಂತರ ಯುವಕರಲ್ಲಿ ಒಬ್ಬರು. ಭ್ರಮನಿರಸನಗೊಂಡ ಆಜಾದ್‌ರು ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ಸೇರ್ಪಡೆಯಾದರು. ಮುಂಚೂಣಿಯಲ್ಲಿ ನಿಂತರು.

ಬಂಗಾಲದಲ್ಲಿ ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ಮಗ್ನರಾಗಿದ್ದ 'ಅನುಶೀಲನ ಸಮಿತಿ'ಯ ಮುಂದಾಳುಗಳಲ್ಲಿ ಜೋಗೇಶ್ ಚಂದ್ರ ಚಟರ್ಜಿ ಒಬ್ಬರು. ಅಲ್ಲಲ್ಲಿ ಹರಡಿ ಹಂಚಿಹೋಗಿದ್ದ ಕ್ರಾಂತಿಕಾರಿ ಸಂಸ್ಥೆಗಳನ್ನು ಒಂದೇ ಛತ್ರಛಾಯೆಯಲ್ಲಿ ತಂದು ಒಟ್ಟು ಸೇರಿಸುವ ಇಚ್ಛೆ ಅವರಿಗಿತ್ತು. ಒಂದೊಮ್ಮೆ ಮಹಾಪರಾಕ್ರಮ ಮೆರೆಸಿದ್ದ 'ಗದರ್ ಪಕ್ಷ' ಮುರಿದು ಬಿದ್ದಿತ್ತು. ಅದರ ಕೆಲವು ನಾಯಕರು 'ಅಹಿಂಸಾತ್ಮಕ' ವಿಧಾನಗಳ ಕಡೆ ನೋಡಲಾರಂಭಿಸಿದ್ದರು. ಆದರೆ ಕ್ರಾಂತಿ ಸಂಸ್ಥೆಯನ್ನು ಬೆಳೆಸಿ, ನಿಲ್ಲಿಸಲು ದುಡಿಯುತ್ತಿದ್ದ ಶಚೀಂದ್ರನಾಥ ಸನ್ಯಾಲರಂಥವರಿಗೆ ಇದು ಹಿಡಿಸಿರಲಿಲ್ಲ. ಶಚೀಂದ್ರನಾಥ ಸನ್ಯಾಲ್ ಮತ್ತು ಜೋಗೇಶ್ ಚಟರ್ಜಿ ಜೊತೆಗೂಡಿ ತರುಣರ ಸಂಘಟನೆಗೆ ತೊಡಗಿದ್ದರು. ಉತ್ತರ ಭಾರತವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿಸಿಕೊಂಡರು.

1923ರಲ್ಲಿ ಕಾಶಿಯಲ್ಲಿ ಕ್ರಾಂತಿಕಾರಿ ಕೇಂದ್ರದ ಪ್ರಾರಂಭದ ಸಿದ್ಧತೆಗಾಗಿ ಸಭೆಯೊಂದು ನಡೆಯಿತು. ಆ ಸಭೆಯಲ್ಲಿ ಜೋಗೇಶ್ ಚಟರ್ಜಿ, ಶಚೀಂದ್ರ ಸನ್ಯಾಲ್, ರಾಜೇಂದ್ರ ಲಾಹಿರಿ, ಚಂದ್ರಶೇಖರ ಆಜಾದ್, ಕುಂದನ್‌ಲಾಲ್ ಗುಪ್ತ, ಜೋಗಿಂದರ್ ಶುಕ್ಲ ಮೊದಲಾದವರು ಪಾಲ್ಗೊಂಡಿದ್ದರು. ಈ ಸಭೆ 'ಹಿಂದೂಸ್ತಾನ್ ರಿಪಬ್ಲಿಕನ್ ಆರ್ಮಿ'ಯ ಉಗಮಕ್ಕೆ ಕಾರಣವಾಯಿತು. ಉತ್ತರ ಪ್ರದೇಶದ ಸಂಘಟಕರಾಗಿ ಪಂಡಿತ ರಾಮಪ್ರಸಾದ್ ಬಿಸ್ಮಿಲ್‌ರು ಕಾರ್ಯನಿರ್ವಹಿಸಲು ಮುಂದೆ ಬಂದರು. ಈ ಸಂಸ್ಥೆಯೇ ಆಜಾದ್‌ರ ಉಸಿರಾಯಿತು. 16-17 ವರುಷದ ಆಜಾದ್‌ರನ್ನು ರಾಮಪ್ರಸಾದರು ಕ್ವಿಕ್ ಸಿಲ್ವರ್ (ಪಾದರಸ) ಎಂದು ಕರೆಯುತ್ತಿದ್ದರು.

1925 ಆಗಸ್ಟ್ 9 ರಂದು ಕಾಕೋರಿ ಎಂಬಲ್ಲಿ ಕ್ರಾಂತಿಕಾರಿಗಳು ರೈಲು ತಡೆದು ಸರಕಾರಿ ಖಜಾನೆ ಲೂಟಿ ಮಾಡಿದರು. ಇದಕ್ಕೆ ಹೊಣೆಗಾರರಾದ 10 ಜನರಲ್ಲಿ ಆಜಾದ್‌ರೂ ಒಬ್ಬರು. ಈ ಮೊಕದ್ದಮೆಯಲ್ಲಿ ಬಂಧಿತರಾದ ರಾಮಪ್ರಸಾದ್ ಬಿಸ್ಮಿಲ್, ಅಷ್ಫಕ್ ಉಲ್ಲಾಖಾನ್, ಠಾಕೂರ್ ರೋಷನ್ ಸಿಂಗ್ ಮತ್ತು ರಾಜೇಂದ್ರನಾಥ್ ಲಾಹಿರಿ ಈ ನಾಲ್ವರಿಗೆ ಬ್ರಿಟಿಷ್ ಸರಕಾರ ಮರಣದಂಡನೆ ವಿಧಿಸಿತು. ಉಳಿದವರಿಗೆ ಜೀವಾವಧಿ ಶಿಕ್ಷೆ, ದೀರ್ಘಾವಧಿ ಶಿಕ್ಷೆ ವಿಧಿಸಲ್ಪಟ್ಟಿತು. 1927 ಡಿಸೆಂಬರ್ 19ರಂದು ಬಿಸ್ಮಿಲ್ ಮತ್ತಿತರರನ್ನು ಗಲ್ಲಿಗೇರಿಸಲಾಯಿತು. ಪೋಲೀಸರ ಕೈಗೆ ಸಿಕ್ಕದ ಒಬ್ಬನೇ ಒಬ್ಬ ವ್ಯಕ್ತಿ ಆಜಾದ್. 1925 ಆಗಸ್ಟ್ 9 ರಿಂದ ತಲೆತಪ್ಪಿಸಿಕೊಂಡಿದ್ದ ಆಜಾದ್‌ರು ತಮ್ಮ ಜೀವನದ ಕೊನೆಯುವರೆಗೂ ಜಾಗೃತರಾಗೇ ಉಳಿದರು. ಶಚೀಂದ್ರನಾಥ ಸನ್ಯಾಲರ ಅಂದಾಜಿನ ಪ್ರಕಾರ ಕ್ರಾಂತಿಕಾರಿಯೊಬ್ಬ ಹೆಚ್ಚೆಂದರೆ ಎರಡುವರ್ಷ ಪೋಲೀಸರ ಕಣ್ಣಿಗೆ ಮಣ್ಣೆರಚಬಲ್ಲ. ಆದರೆ ಆಜಾದ್ ಸನ್ಯಾಲರ ಈ ಅಂದಾಜನ್ನು ಸುಳ್ಳಾಗಿಸಿದರು.

[ಮುಂದುವರಿಯುವುದು]

ಖ್ಯಾತ ಪತ್ರಿಕೆಗಳ ವಿಕೃತ ಪ್ರಚಾರ

ಎಂ. ಬಸವಪುನ್ನಯ್ಯ

ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಕ್ಷದ ಬಗ್ಗೆ ಮತ್ತು ಪಕ್ಷದ ಪೊಲಿಟ್ ಬ್ಯೂರೋ ಸದಸ್ಯರು ಹಾಗೂ ಕೇಂದ್ರ ಸಮಿತಿ ಸದಸ್ಯರುಗಳ ಮಧ್ಯೆ ಆಗುತ್ತಿದೆ ಎಂದು ಹೇಳಲಾದ ಒಳಜಗಳದ ಬಗ್ಗೆ ಕೆಲವು ದೊಡ್ಡ ಬಂಡವಾಳಶಾಹಿ ಒಡೆತನದ ಪತ್ರಿಕೆಗಳು ಕಟ್ಟುಕತೆಗಳನ್ನು ಸೃಷ್ಟಿಸಿ ಪ್ರಕಟ ಮಾಡುವುದರಲ್ಲೇ ಸಾರ್ಥಕತೆಯನ್ನು ಕಾಣುತ್ತಿವೆ.

ದೆಹಲಿಯಲ್ಲಿ ನಡೆದ ಮೂರು ದಿನಗಳ ಸಭೆಯ ನಂತರ ಜನವರಿ ಹದಿಮೂರರಂದು ಪೊಲಿಟ್ ಬ್ಯೂರೋದಿಂದಕೊಟ್ಟ ಪತ್ರಿಕಾ ಪ್ರಕಟಣೆಯನ್ನು ವಿರೂಪಗೊಳಿಸಿ ತಿರುಗುಮುರುಗು ಮಾಡಿದ್ದನ್ನು ಈ ಸಂದರ್ಭದಲ್ಲಿ ಉದಾಹರಿಸಬಹುದು. ತಮ್ಮ ಪತ್ರಿಕೆ "ಸಾರ್ವಜನಿಕ ಪತ್ರಿಕೆ", "ರಾಷ್ಟ್ರೀಯ ಹಾಗೂ ಮುಕ್ತ ಪತ್ರಿಕೆ" ಎಂದು ಕೊಚ್ಚಿಕೊಳ್ಳುವ ಕೆಲವು ದಿನಪತ್ರಿಕೆಗಳು ಈ ಮೇಲಿನ ಪ್ರಕಟಣೆಯಲ್ಲಿ ತಮಗೆ ಸರಿ ಎನಿಸಿದ ಮತ್ತು ತಮ್ಮ ಮನಸ್ಸಿಗೆ ಬಂದ ಅಂಶಗಳನ್ನು ಅಚ್ಚುಹಾಕಬಹುದು; ಆದರೆ ಪ್ರಕಟಣೆಯ ಮೂಲ ಅಂಶಗಳನ್ನೇ ಮರೆಮಾಚಿ, ಕಟ್ಟುಕತೆಗಳನ್ನು ಸೃಷ್ಟಿಸಿ, ಸಂಪೂರ್ಣವಾಗಿ ವಿರೂಪಗೊಳಿಸಿದ ವಿಚಾರಗಳನ್ನು ಪ್ರಕಟಿಸುವ ಈ "ಮುಕ್ತ" ಪತ್ರಿಕೆಯವರ ಕೆಲಸ 'ಮುಕ್ತ' ಪತ್ರಿಕೆಯವರು ಮಾಡಬೇಕಾದ ಕೆಲಸವಲ್ಲ.

ಅವರ ಸಂಶೋಧನೆ

'ಇಂಡಿಯನ್ ಎಕ್ಸ್‌ಪ್ರೆಸ್'ನ 'ಪ್ರತಿಭಾವಂತ ವರದಿಗಾರ'ನ ಶೋಧನೆಯನ್ನು ನೋಡಿ-"ಆರು ಪಕ್ಷಗಳ ಬಣದ ಪರವಾಗಿರುವ ಶ್ರೀ ರಾಮಮೂರ್ತಿ ಮತ್ತು ಶ್ರೀ ಹೆಚ್.ಕೆ. ಸುರ್ಜೀತ್‌ರ ನಾಯಕತ್ವದ ಬಹುಪಾಲು ಜನರ ಒಂದು ಪಂಗಡ." ಇನ್ನೊಂದು ಶೋಧನೆ ಹೀಗಿದೆ– "ಸೋವಿಯೆತ್ ಮತ್ತು ಚೀನಾ ಕಮ್ಯೂನಿಸ್ಟ್ ಪಕ್ಷಗಳನ್ನು ಸಮಾನ ಅಂತರದಲ್ಲಿರುವ ವಿಚಾರದಲ್ಲಿ ಸಿ.ಪಿ.ಐ.(ಎಂ)ನ ಕೇಂದ್ರಸಮಿತಿಯಲ್ಲಿದೆಯೆಂದುಹೇಳಲಾದ ಭಿನ್ನಾಭಿಪ್ರಾಯ; ಹಾಗೂ ಸೋವಿಯೆತ್ ಪಕ್ಷದ ಪ್ರಧಾನ ಕಾರ್ಯದರ್ಶಿಲಿಯೋನೆಡ್ ಬ್ರೆಜ್ನೇವ್ ಇತ್ತೀಚೆಗೆ ಭಾರತಕ್ಕೆ ಭೇಟಿನೀಡಿದ್ದಾಗ ಸಂಧಾನಮಾಡಲು ಹೋಗಿ ಮುಖಭಂಗವಾದದ್ದರ ಬಗ್ಗೆ ಪಶ್ಚಿಮ ಬಂಗಾಲ ನಾಯಕರಿಂದ ವಿರೋಧ". ಮೂರನೇ ಹಾಗೂ ಮೈನವಿರೇಳಿಸುವ ಶೋಧನೆ ಹೀಗಿದೆ-"ಚೀನದ ಕಮ್ಯೂನಿಸ್ಟ್ ಪಾರ್ಟಿಯ ಜತೆ ಅನ್ಯೋನ್ಯ ಸಂಬಂಧ ಇಟ್ಟುಕೊಳ್ಳಬೇಕೆನ್ನುವ ಶ್ರೀ ಪ್ರಮೋದ್‌ದಾಸ್‌ಗುಪ್ತ ಮತ್ತು ಶ್ರೀ ಬಸವಪುನ್ನಯ್ಯರ ನಾಯಕತ್ವದಲ್ಲಿನ ಒಂದು ಬಣ; ಹಾಗೂ ಚೀನದ ಕಮ್ಯೂನಿಸ್ಟ್ ಪಾರ್ಟಿಯ ಕಡೆ ಯಾವುದೇ ರೀತಿಯ ಒಲವು ತೋರಿಸುವುದನ್ನು ವಿರೋಧಿಸುವ ಶ್ರೀ ಇ.ಎಂ.ಎಸ್. ನಂಬೂದಿರಿಪಾದ್ ಮತ್ತು ಬಿ. ಟಿ. ರಣದಿವೆ ಮತ್ತು ಸೋವಿಯೆತ್‌ಪರ ಶ್ರೀ ರಾಮಮೂರ್ತಿ ಮತ್ತು ಶ್ರೀ ಎಚ್. ಕೆ. ಸುರ್ಜೀತ್ ಇವರ ನಾಯಕತ್ವದ ಇನ್ನೊಂದು ಬಣ."

ಇಂಡಿಯನ್ ಎಕ್ಸ್‌ಪ್ರೆಸ್ ವರದಿಗಾರನ ಮೇಲಿನ ವರದಿಗಳಿಂದ ನಿರಾಸೆಗೊಂಡಂತೆ ಕಂಡ, ಸಿ.ಪಿ.ಐ(ಎಂ)ನ ಬಗ್ಗೆ ಸುಳ್ಳು ವರದಿಗಳನ್ನು ಸೃಷ್ಟಿ ಮಾಡುವುದಕ್ಕಾಗಿಯೇ ನೇಮಕಗೊಂಡಿದ್ದಾನೋ ಎನ್ನುವ ರೀತಿಯಲ್ಲಿ 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯ 'ವಿಶೇಷ ವರದಿಗಾರ' ತನ್ನ ವಿಚಿತ್ರ ವರದಿಯನ್ನು ತಯಾರಿಸಿದ. 'ಇಂಡಿಯನ್ ಎಕ್ಸ್‌ಪ್ರೆಸ್'ವರದಿಗಾರನಿಗಿಂತ ತಾನು ಒಂದು ತೂಕ ಹೆಚ್ಚು ಎಂದು ತೋರಿಸಿಕೊಳ್ಳಬೇಕಲ್ಲ? ಅಲ್ಲದೆ ತನ್ನ ಮೂಲಭೂತ ಪ್ರತಿಭೆಯನ್ನು ಪ್ರದರ್ಶಿಸಬೇಕಲ್ಲ? ಹೇಗೆ ಮಾಡಬೇಕು? ಸರಿ, ಮತ್ತೊಂದು ಹೊಸ ಕತೆಯೇ ಹೆಣೆಯಲ್ಪಟ್ಟಿತು: "ಪಕ್ಷದಲ್ಲಿನ ಆಂತರಿಕ ಒಳಜಗಳಗಳನ್ನು ಪರಿಹರಿಸಿಕೊಳ್ಳಲಾಗದ್ದರಿಂದ ಏಪ್ರಿಲ್ ತಿಂಗಳಲ್ಲಿ ನಡೆಯಬೇಕಾಗಿದ್ದ ಪಾರ್ಟಿ ಕಾಂಗ್ರೆಸ್ಸನ್ನು ಕೊನೆಪಕ್ಷ ಇನ್ನೆರಡು ವರ್ಷಕ್ಕಾದರೂ ಮುಂದುಹಾಕಲಾಗುತ್ತಿದೆ; ಎರಡು ದೊಡ್ಡ ಕಮ್ಯೂನಿಸ್ಟ್ ಬಣಗಳಿಂದ ಸಮಾನ ಅಂತರದಲ್ಲಿರಬೇಕೆಂಬ ನಿಲುವು ಅವರನ್ನು ಕಷ್ಟದಲ್ಲಿ ಸಿಕ್ಕಿಸಿದೆ ಮತ್ತು ಯಾವುದಾದರೂ ಒಂದು ಕಡೆ ಬೆಂಬಲ ನೀಡಬೇಕೆಂಬ ಒತ್ತಾಯ ಹೆಚ್ಚುತ್ತಿದೆ. ಉದಾಹರಣೆಗೆ ರಾಷ್ಟ್ರರಕ್ಷಣೆಯ ವಿಷಯದಲ್ಲಿ ಶಸ್ತ್ರಾಸ್ತ್ರಗಳನ್ನು ಪೂರೈಸುತ್ತಿರುವುದಕ್ಕೆ ಅಮೇರಿಕದ ಜತೆ ಚೀನಾವನ್ನು ಖಂಡಿಸುವುದು ಅವರಿಗೆ ಕಷ್ಟವಾಗಿದೆ". ಇನ್ನೂ ಮುಂದುವರೆದು ವರದಿಗಾರ ಹೇಳುತ್ತಾನೆ: "ಆಂತರಿಕ ಹಾಗೂ ಅಂತರಾಷ್ಟ್ರೀಯ ವಿಚಾರದಲ್ಲಿ ಪಕ್ಷದ ಧೋರಣೆ ಸಂಪೂರ್ಣವಾಗಿ ದಾರಿತಪ್ಪಿದ ಹಾಗೆ ಕಾಣುತ್ತಿದೆ". ಪಕ್ಷದಲ್ಲಿ ಇದೆಯೆಂದು ಹೇಳಲಾದ ಆಂತರಿಕ ಕಲಹವನ್ನು ಹೊರಹಾಕುವಾಗ ಎರಡೂ ಪತ್ರಿಕೆಯ ವರದಿಗಾರರು ಭುಜಕ್ಕೆ ಭುಜಕೊಟ್ಟು ಹೇಳುತ್ತಾರೆ-"ಪಶ್ಚಿಮ ಬಂಗಾಲದ ನಾಯಕರು ಲೋಕದಳ ಮತ್ತು ಕಾಂಗ್ರೆಸ್ (ಯು) ಪಕ್ಷದೊಂದಿಗಿನ ಸಿ.ಪಿ.ಐ.(ಎಂ)ನ ಸಹಕಾರವನ್ನು ವಿರೋಧಿಸಿದರೆ, ಉಳಿದ ಪೊಲಿಟ್‌ಬ್ಯೂರೋ ಸದಸ್ಯರು ಪಶ್ಚಿಮ ಬಂಗಾಲದ ವಾಮರಂಗವನ್ನು ವಿರೋಧಿಸುತ್ತಾರೆ".

ಉದ್ದೇಶಪೂರ್ವಕ ಸುಳ್ಳು ಸಾಧನೆ

ಈ ಮೇಲಿನ ಕತೆಗಳ ಉದ್ದೇಶ ಇಷ್ಟೇ: ಎಡ ಮತ್ತು ಪ್ರಜಾಪ್ರಭುತ್ವವಾದೀ ಶಕ್ತಿಗಳನ್ನು ಒಟ್ಟುಗೂಡಿಸಬೇಕೆಂಬ ಧೋರಣೆ-ಸರ್ವಾಧಿಕಾರೀ ಶಕ್ತಿಗಳಿಂದ ನಮ್ಮ ದೇಶದ ಸಂವಿಧಾನದ ಮೇಲೆ ಆಗುತ್ತಿರುವ ಪ್ರಹಾರಗಳನ್ನು ತಡೆದು ಪ್ರಜಾಪ್ರಭುತ್ವವನ್ನು ರಕ್ಷಿಸುವ ಸಲುವಾಗಿ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಒಟ್ಟುಗೂಡಿಸಬೇಕೆಂಬ ಪ್ರಬಲ ಧೋರಣೆಯನ್ನು ಹೊಂದಿರುವ ಸಿ.ಪಿ.ಐ.(ಎಂ) ಪಕ್ಷವು ತನ್ನ ಪಕ್ಷದೊಳಗೇ ವಿರೋಧವನ್ನು ಎದುರಿಸುತ್ತಿದೆ ಎಂದು ಭೋಳೇ ಜನರನ್ನು ತಪ್ಪುದಾರಿಗೆಳೆಯುವ ಉದ್ದೇಶದ್ದಾಗಿದೆ. ಕಳೆದ ಮೂವತ್ತು ವರ್ಷಗಳಿಂದ ನಡೆದು ಬಂದಿರುವ ಬಂಡವಾಳಶಾಹಿ-ಜಮೀನ್ದಾರೀ ಆಡಳಿತ ವ್ಯವಸ್ಥೆಯಿಂದಾಗಿ ನಮ್ಮ ದೇಶ ಇಂದು ಅಧೋಗತಿಗೆ ಇಳಿದಿದೆ ಮತ್ತು ಸಮಸ್ಯೆಗಳು ಕಿತ್ತುತಿನ್ನುತ್ತಿವೆ. ಇಂತಹ ವ್ಯವಸ್ಥೆಗೆ ಪರ್ಯಾಯವಾಗಿ ಹುಟ್ಟುತ್ತಿರುವ ಎಡ ಮತ್ತು ಪ್ರಜಾಪ್ರಭುತ್ವವಾದೀ ಶಕ್ತಿಗಳ ಐಕ್ಯತೆಯನ್ನು ಹಾಗೂ ಅದರ ಪರಿಕಲ್ಪನೆಯನ್ನು ಜರಿಯುವ ಉದ್ದೇಶ ಕೂಡ ಅವರದ್ದಾಗಿದೆ. ಎಲ್ಲಾ ಜನಹಿತ ಶಕ್ತಿಗಳನ್ನು ಒಟ್ಟುಗೂಡಿಸಲು ಅವಿರತ ಶ್ರಮಿಸುತ್ತಿರುವ ಸಿ.ಪಿ.ಐ.(ಎಂ) ಪಕ್ಷವನ್ನು ಹೀಗಳೆಯುವುದು ಅವರ ಉದ್ದೇಶ. ಈ ಪತ್ರಿಕೆಗಳು ಸುಳ್ಳು ಕತೆಗಳನ್ನು ಪ್ರಕಟಿಸುತ್ತಿರುವುದರಿಂದ, ನಮ್ಮ ಓದುಗರಿಗೆ ನಿಜವಾದ ವಿಚಾರವನ್ನು ನಾವೀಗ ಹೇಳುವ ಪ್ರಸಂಗ ಬಂದಿದೆ.

ಪಾರ್ಟಿಕಾಂಗ್ರೆಸ್

ಪಾರ್ಟಿಕಾಂಗ್ರೆಸ್ ವಿಚಾರದಲ್ಲಿ ನಮ್ಮ ಪಕ್ಷ ವೇಳಾಪಟ್ಟಿಯನ್ನು ಆದಷ್ಟೂ ಹೊಂದಿಕೊಂಡೇ ಇಲ್ಲಿಯವರೆಗೂ ಬಂದಿದೆ. ಹಿಂದೆ ಎರಡು ಬಾರಿ-1965-66ರಲ್ಲಿ ಮತ್ತು 1975-77ರಲ್ಲಿ ಪ್ರಕಟಿಸಿದಂತೆ ಪಾರ್ಟಿಕಾಂಗ್ರೆಸ್ಸನ್ನು ನಡೆಸಿಕೊಂಡು ಬರದಿರಲಿಕ್ಕೆ ನಮ್ಮ ಪಕ್ಷದ ಮೇಲೆ ಬಂಡವಾಳಶಾಹಿ, ಜಮೀನ್ದಾರ ವರ್ಗದ ಸರಕಾರಗಳು ಮಾಡಿದ ದಾಳಿಯೇ ಕಾರಣ. ಬಹಳ ಗುರುತರವಾದ ಆಂತರಿಕ ಭಿನ್ನಾಭಿಪ್ರಾಯಗಳನ್ನೂ ಪಾರ್ಟಿಕಾಂಗ್ರೆಸ್‌ನಲ್ಲಿ ಚರ್ಚೆಯ ಮೂಲಕ ಪರಿಹರಿಸಿಕೊಂಡಿದ್ದೇವೆ. ಮುಂದಿನ ಪಾರ್ಟಿಕಾಂಗ್ರೆಸ್‌ನ ಉದ್ದೇಶದ ಬಗ್ಗೆ ಫೆಬ್ರವರಿಯಲ್ಲಿ ಸೇರಿದ ಕೇಂದ್ರಸಮಿತಿಯ ನಿರ್ಧಾರ ತೆಗೆದುಕೊಂಡಿರುವುದರಿಂದ ಅದರ ಬಗ್ಗೆ ಯಾವುದೇ ಊಹಾಪೋಹೆಗಳಿಗೆ ಅವಕಾಶವಿಲ್ಲ.

ಬೇರೆಪಕ್ಷಗಳ ಜತೆ ಸಂಬಂಧ

ಸೋವಿಯತ್ ಮತ್ತು ಚೀನಾ ದೇಶಗಳನ್ನೊಳಗೊಂಡು ಯಾವುದೇ ಸಮಾಜವಾದಿ ರಾಷ್ಟ್ರಗಳ ಬಗ್ಗೆ ನಿಲುವನ್ನು ತಾಳುವಾಗ ಗೊಂದಲಕ್ಕೆ ಅವಕಾಶವಿಲ್ಲದಂತೆ ಹೃತ್ಪೂರ್ವಕ ಬೆಂಬಲವನ್ನು ನೀಡುವುದು ಸಿ.ಪಿ.ಐ.(ಎಂ)ನ ಧೋರಣೆಯಾಗಿದೆ. ದುಡಿಯುವ ವರ್ಗದ ಕ್ರಾಂತಿ ಯಶಸ್ವಿಯಾಗಿ ಸಮಾಜವಾದಿ ರಾಜ್ಯ ಅಥವಾ ರಾಷ್ಟ್ರ ಉದಯವಾದಾಗ ಅದನ್ನು ಸ್ವಾಗತಿಸುವುದು ನಮ್ಮ ಕರ್ತವ್ಯವೆಂದು ಕಮ್ಯೂನಿಸ್ಟರಾದ ನಾವುತಿಳಿಯುತ್ತೇವೆ. ಸಮಾಜವಾದಿ ರಾಷ್ಟ್ರಗಳಲ್ಲಿ ಆಳುತ್ತಿರುವ ಕಮ್ಯೂನಿಸ್ಟ್ ಪಕ್ಷ ನಮ್ಮ ಪಕ್ಷದೊಂದಿಗೆ ಹಾರ್ದಿಕ ಬಾಂಧವ್ಯ ಹೊಂದಿರಲಿ ಅಥವಾ ಹೊಂದಿಲ್ಲದಿರಲಿ ಎಲ್ಲಾ ಸಮಾಜವಾದಿ ರಾಷ್ಟ್ರಗಳಿಗೆ ನಮ್ಮ ಮುಕ್ತಕಂಠದ ಹಾಗೂ ನಿಷ್ಕಳಂಕ ಬೆಂಬಲವನ್ನು ಮಾತ್ರ ನಾವು ನೀಡಿಯೇ ನೀಡುತ್ತೇವೆ.

ಆದ್ದರಿಂದ ಯಾವುದೇ ಸಮಾಜವಾದಿ ರಾಷ್ಟ್ರಗಳಿಂದ 'ಸಮಾನಾಂತರದಲ್ಲಿರುವ' ಪ್ರಶ್ನೆಯೇ ಏಳುವುದಿಲ್ಲ. 'ಸಮಾನಾಂತರ' ಶಬ್ದವೇ ಇಲ್ಲಿ ಅಪ್ರಸ್ತುತ ಹಾಗೂ ಅಸಂಗತವಾಗುತ್ತದೆ. ಸಮಾಜವಾದೀ ರಾಷ್ಟ್ರಗಳಲ್ಲಿನ ಸಮಾಜವಾದದ ಮುನ್ನಡೆಯ ಬಗ್ಗೆ ಸಿ.ಪಿ.ಐ.(ಎಂ) ಪ್ರಚಾರಮಾಡುತ್ತದೆ ಮತ್ತು ಸಮಾಜವಾದವನ್ನುಯಾವುದೇ ಅನುಮಾನಕ್ಕೆಡೆಯಿಲ್ಲದೆ ರಕ್ಷಿಸಲು ಶ್ರಮಿಸುತ್ತದೆ. ಯಾವುದೇ ಒಂದು ಸಮಾಜವಾದಿ ರಾಷ್ಟ್ರದ ಸ್ನೇಹ ಅಥವಾ ಅನುಕಂಪ ಗಳಿಸಲು ಸಿ.ಪಿ.ಐ.(ಎಂ) ಇದನ್ನು ಮಾಡುತ್ತಿಲ್ಲ. ಸಮಾಜವಾದದ ತತ್ವವನ್ನು ಹಾಗೂ ಅದರ ಯಶಸ್ಸನ್ನು ನಮ್ಮ ದೇಶದ ಕಾರ್ಮಿಕ ವರ್ಗದತ್ತ, ಕೋಟ್ಯಾಂತರ ಶ್ರಮಜೀವಿಗಳತ್ತ ಮತ್ತು ಸಮಾಜವಾದ, ಸಮತಾವಾದದ ಬಗ್ಗೆ ಹೆಚ್ಚುಹೆಚ್ಚು ತಿಳಿಯಬಯಸುವ ಎಲ್ಲ ಜನರತ್ತ ಕೊಂಡೊಯ್ಯುವುದೇ ನಮ್ಮ ಗುರಿಯಾಗಿದೆ. ಸಮಾಜವಾದ ಮತ್ತು ಸಮತಾವಾದದ ಕಕ್ಷೆಗೆ ಹೆಚ್ಚುಹೆಚ್ಚು ಜನರನ್ನು ತರುವುದೇ ನಮ್ಮ ಧ್ಯೇಯವಾಗಿದೆ. ಸಮಾಜವಾದಿ ರಾಷ್ಟ್ರಗಳ ಅಭಿವೃದ್ಧಿಯನ್ನು ಮತ್ತು ಸಾಧನೆಯನ್ನು ಜನಪ್ರಿಯಗೊಳಿಸುವುದು ನಮ್ಮ ಪಕ್ಷದ ಅವಿಭಿನ್ನ ಭಾಗವಾಗಿದೆಯೆಂದು ನಾವು ತಿಳಿದಿದ್ದೇವೆ.

ಯಾವುದೋ ಒಂದು ಕಾರಣಕ್ಕಾಗಿ, ಯಾವುದೋ ಒಂದು ಸಮಾಜವಾದೀ ರಾಷ್ಟ್ರದ ಕಮ್ಯೂನಿಸ್ಟ್ ಪಕ್ಷವು ಸಿ.ಪಿ.ಐ.(ಎಂ)ನ್ನು ಕಮ್ಯೂನಿಸ್ಟ್ ಪಕ್ಷವೆಂದು ಪರಿಗಣಿಸದೆ ಇರುವುದಾಗಲೀ ಅಥವಾ ಸಿ.ಪಿ.ಐ.(ಎಂ)ನ ಜತೆ ಸಂಬಂಧ ಬೆಳೆಸಿಕೊಳ್ಳದೇ ಇರುವುದಾಗಲೀ, ಸಮಾಜವನ್ನು ಮತ್ತು ಸಮಾಜವಾದಿ ರಾಷ್ಟ್ರಗಳನ್ನು ಬೆಂಬಲಿಸುವ ಸಿ. ಪಿ. ಐ. (ಎಂ)ನ ಧೋರಣೆಯನ್ನು ಬದಲಾಯಿಸಲು ಸಾಧ್ಯವಿಲ್ಲ. ಯುಗೋಸ್ಲಾವಿಯ ಮತ್ತು ಅವರ ಸಮಾಜವಾದಿ ಮುನ್ನಡೆಯ ಬಗ್ಗೆ ನಮ್ಮ ಪಕ್ಷ ತಪ್ಪು ಅಭಿಪ್ರಾಯಗಳನ್ನು ಮತ್ತು ಸಂಶಯಗಳನ್ನು ಇಟ್ಟುಕೊಂಡಿತ್ತು ಎನ್ನುವುದರಲ್ಲಿ ಅನುಮಾನವೇನಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಸಿ.ಪಿ.ಐ.(ಎಂ) ಹಾಗೂ ಯುಗೋಸ್ಲಾವಿಯಾಗಳ ಸಂಬಂಧ ವಿಸ್ತೃತಗೊಂಡಿದೆ.

ತಾತ್ವಿಕ ಧೋರಣೆ

ಸಮಾಜವಾದೀ ರಾಷ್ಟ್ರಗಳ ಪ್ರತಿಯೊಂದು ನೀತಿಯನ್ನು, ಕಾರ್ಯವನ್ನು ಮತ್ತು ಪ್ರತಿಯೊಂದು ಅಪ್ರಾಯೋಗಿಕ ಸೈದ್ಧಾಂತಿಕ ಯೋಜನೆಗಳನ್ನು ಬೆಂಬಲಿಸಲು ಬದ್ಧರಾಗಿರಬೇಕೆನ್ನುವುದು ಸಿ.ಪಿ.ಐ.(ಎಂ)ನ ತಾತ್ವಿಕ ಧೋರಣೆಯ ಅರ್ಥವೇ? ಸಿ.ಪಿ.ಐ.(ಎಂ) ಹಾಗೆಂದು ಎಂದೂ ಭಾವಿಸಿಲ್ಲ. ಮತ್ತು ಪ್ರತಿಯೊಂದು ನಿರ್ದಿಷ್ಟ ವಿಷಯಗಳಲ್ಲೂ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ತತ್ವದ ಆಧಾರದ ರೀತ್ಯ ತನ್ನದೇ ಆದ ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುವ ಹಕ್ಕು ತನಗಿದೆ ಎಂದು ತಿಳಿದಿದೆ. ಸಮಾಜವಾದಿ ರಾಷ್ಟ್ರದ ಆಳುವ ಪಕ್ಷವಾಗಿದೆ ಎಂದ ಮಾತ್ರಕ್ಕೆ ಆ ಕಮ್ಯೂನಿಸ್ಟ್ ಪಕ್ಷಗಳು ಬಲ ಅಥವಾ ಎಡ ಪರಿಷ್ಕರಣವಾದಿ ತಪ್ಪುಗಳಿಗೆ ಬಲಿಬೀಳುವ ಅಪಾಯದಿಂದ ಮುಕ್ತವಾಗಿಲ್ಲ ಎನ್ನುವುದನ್ನು ಚರಿತ್ರೆ ಸಾಬೀತುಪಡಿಸಿದೆ. ಹಾಗೆಯೇ ಯಾವುದೋ ಒಂದು ಅಥವಾ ಇನ್ನೊಂದು ಕಮ್ಯೂನಿಸ್ಟ್ ಪಕ್ಷ ಆಳುವ ಪಕ್ಷವಾಗಿದೆ ಎಂದ ಮಾತ್ರಕ್ಕೆ ಯಾವುದೇ ಕಮ್ಯೂನಿಸ್ಟ್ ಪಕ್ಷದ ಅಡಿಗಲ್ಲಾಗಿರುವಶ್ರಮಿಕವರ್ಗದ ಅಂತರಾಷ್ಟ್ರೀಯತೆಯ ದೃಷ್ಟಿಯನ್ನು ಹಾಗ್ಗಾಗೇ ಒಪ್ಪಿಕೊಳ್ಳಲಾಗದು. ಹೀಗಿದ್ದಾಗ್ಯೂ "ಶ್ರಮಿಕವರ್ಗದ ಅಂತರಾಷ್ಟ್ರೀಯತೆಯ ತತ್ವವನ್ನು ವಾಸ್ತವವಾಗಿ ಅನ್ವಯಿಸುವಾಗ ಮತ್ತು ರೂಢಿಸಬೇಕಾದಾಗ ಭಿನ್ನಾಭಿಪ್ರಾಯ ಉಂಟಾಗಬಹುದು ಮತ್ತು ಅಂತಹ ಸಂದರ್ಭಗಳಲ್ಲಿ ಪ್ರತಿಯೊಂದು ಪಕ್ಷವೂ ತನ್ನದೆ ಆದ ಸ್ವತಂತ್ರ ಅಭಿಪ್ರಾಯವನ್ನು ಹೊಂದುವ ಸ್ವಾತಂತ್ರ್ಯವಿದೆ. ಹೀಗೆ ಮಾಡುವಾಗ ಪ್ರತಿಯೊಂದು ಕಮ್ಯೂನಿಸ್ಟ್ ಪಕ್ಷದ ಪ್ರತಿಯೊಂದು ಸ್ವತಂತ್ರ ನಿಲುವುಗಳು ಮಾರ್ಕ್ಸ್‌ವಾದ-ಲೆನಿನ್‌ವಾದದ ತತ್ವ ಮತ್ತು ಶ್ರಮಿಕವರ್ಗದ ಅಂತರಾಷ್ಟ್ರೀಯತೆಯ ತತ್ವಗಳ ಪರೀಕ್ಷೆಗೆ ಒಳಪಡಲೇಬೇಕಾಗುತ್ತದೆ.

(ಮುಂದುವರಿಯುವುದು)

ರಾಷ್ಟ್ರಪತಿಗಳ ಕಣ್ಣೀರು ! ಅದಕ್ಕೆ ಪರಿಹಾರವೇನು ?

ಎನ್. ಕೆ. ಉಪಾಧ್ಯಾಯ

ಜನತಾ ಪಕ್ಷದ ಆಳ್ವಿಕೆಯ ಕಾಲದಲ್ಲಿ ರಾಷ್ಟ್ರಾಧ್ಯಕ್ಷರಾಗಿ ಆರಿಸಿಬಂದ ಸಂಜೀವರೆಡ್ಡಿಯವರು ಹೋದ ವರ್ಷ ಇಂದಿರಾಗಾಂಧಿಯವರು ಅಧಿಕಾರಕ್ಕೆ ಬಂದ ನಂತರ ದೇಶದ ಸಮಸ್ಯೆಗಳ ಕುರಿತು ಹಲವಾರು ಸಲ ಕಟುಸತ್ಯದ ಮಾತುಗಳನ್ನಾಡಿದ್ದಾರೆ. ಇತ್ತೀಚೆಗೆ ಆಂಧ್ರ ಪ್ರದೇಶದಲ್ಲಿ ಸಂಚಾರ ಮಾಡುತ್ತಿದ್ದಾಗಲೂ, ಹಳ್ಳಿಗಾಡು ಜನರ ಬಡತನ, ಅವರ ಶೋಷಣೆ ಕುರಿತು ಅತ್ಯಂತ ಕನಿಕರ ವ್ಯಕ್ತಮಾಡಿದ್ದಾರೆ. ಶ್ರೀಮಂತರ ಸುಲಿಗೆಯನ್ನು ಬಾಯ್ತುಂಬ ಬೈದಿದ್ದಾರೆ. ಮದ್ರಾಸಿನಲ್ಲಿದ್ದಾಗ ಇಂದಿರಾ ಸರಕಾರದ ಆರ್ಥಿಕ ನೀತಿಯನ್ನು ಕಟುವಾಗಿ ಟೀಕಿಸಿದ್ದಾರೆ. ರಾಷ್ಟ್ರಾಧ್ಯಕ್ಷರಾಗಿದ್ದವರೊಬ್ಬರು ಆಳುವ ಪಕ್ಷದ ಆರ್ಥಿಕ-ರಾಜಕೀಯ ನೀತಿಯನ್ನು ತಮ್ಮ ಭಾಷಣಗಳಲ್ಲಿ ಸಮರ್ಥಿಸುವುದು ಸಾಂಪ್ರದಾಯಿಕ ಪರಿಪಾಠ. ಆದರೆ ಸಂಜೀವರೆಡ್ಡಿಯವರ ಭಾಷೆ ಮಾತ್ರ ಅಂಥ ಪರಿಪಾಠಕ್ಕೆ ಪರಂಪರೆಗೆ ಅನುಗುಣವಾಗಿಲ್ಲವೆಂಬುದು ಸತ್ಯಸಂಗತಿ. ಯಾವ ಉದ್ದೇಶದಿಂದ ಇಂಥ ರೀತಿಯಲ್ಲಿ ನುಡಿಯುತ್ತಾರೆಂಬುದು ಮಾತ್ರ ಗೊತ್ತಿಲ್ಲ. ಇವರ ಅಧಿಕಾರ ಕಾಲಾವಧಿ ಮುಗಿಯುತ್ತಾ ಬಂದಿದ್ದು, ಮುಂದಿನ ತಮ್ಮ ರಾಜಕೀಯ ಹಾದಿಯನ್ನು ಸುಗಮಗೊಳಿಸಲು ಇಂಥ ಮಾತುಗಳನ್ನಾಡುತ್ತಿದ್ದಾರೆಂಬ ಟೀಕೆಗಳೂ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಅದೇನೇ ಇರಲಿ. ನಿಜ ಸಂಗತಿಯನ್ನು ತೋಡಿಕೊಳ್ಳುವ ಧೈರ್ಯ ತೋರಿಸುತ್ತಿರುವ ರಾಷ್ಟ್ರಾಧ್ಯಕ್ಷ ಸಂಜೀವರೆಡ್ಡಿಯವರಿಗೆ ಅಭಿನಂದನೆಗಳು.

ರಾಜ್ಯಪಾಲರ ಎರಡು ದಿನಗಳ ಸಮ್ಮೇಳನವನ್ನು ಉದ್ಘಾಟಿಸುತ್ತಾ ಸಂಜೀವರೆಡ್ಡಿಯವರು ಕೆಲವು ಮುಖ್ಯ ವಿಷಯಗಳನ್ನು ತಿಳಿಯಪಡಿಸಿದ್ದಾರೆ. "ಸ್ವಾತಂತ್ರ್ಯ ಪ್ರಾಪ್ತಿಯ ನಂತರ ನಾವು ಸಂಪತ್ತನ್ನು ಸೃಷ್ಟಿಸಿದ್ದೇವೆ. ಆದರೆ ಈ ರಾಷ್ಟ್ರೀಯ ಸಂಪತ್ತಿನ ಹಂಚಿಕೆ ಮಾತ್ರ ಅಸಮಾನವಾಗಿದೆ. ದೇಶದಲ್ಲಿ 5 ದೊಡ್ಡ ಕುಟುಂಬದವರು ರಾಷ್ಟ್ರದ ಒಟ್ಟು ಆದಾಯದಲ್ಲಿ ಪ್ರತಿಶತ 22.6ರಷ್ಟು ಆದಾಯ ಹೊಂದಿದ್ದಾರೆ. 200ಕೋಟಿ ಅಥವಾ ಅದಕ್ಕಿಂತ ಹೆಚ್ಚು ವ್ಯವಹಾರ ನಡೆಸುವ ಸಂಸ್ಥೆಗಳ ಸಂಖ್ಯೆ 1964ರಲ್ಲಿ 42 ಇದ್ದು 1976ರಲ್ಲಿ 101ಕ್ಕೇರಿದೆ.

"ಎಲ್ಲಕ್ಕೂ ಮಹತ್ವದ್ದೆಂದರೆ ದೇಶದ ಜನಸಂಖ್ಯೆಯಲ್ಲಿ ಅರ್ಧಕ್ಕಿಂತ ಹೆಚ್ಚು ಭಾಗ ಇನ್ನೂ ದಾರಿದ್ರ್ಯ ರೇಖೆಯ ಕೆಳಗೇ ಬಾಳುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲೇ ಬಡವರು, ಕೃಷಿಕೂಲಿಗಾರರ ಸಂಖ್ಯೆಯೇ ಹೆಚ್ಚಿದ್ದು ಅವರ ಗಳಿಕೆ ಮಾತ್ರ ಕಡಿಮೆಯಾಗಿದೆ. ಆಹಾರಧಾನ್ಯ ಸಾಕಷ್ಟು ಸಿಗುತ್ತಿದ್ದರೂ ಜನರ ಕೊಳ್ಳುವಶಕ್ತಿ ಕಡಿಮೆಯಾಗಿದೆ. ಫಲವಾಗಿ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿನ ಜನ ಆಹಾರಾಭಾವದಿಂದ ಸೊರಗುತ್ತಿದ್ದಾರೆ".

ಈ ನುಡಿಯ ಮುತ್ತುಗಳನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಮುಖಂಡರು ಹೇಳಿದಿಲ್ಲ. ರಾಷ್ಟ್ರಾಧ್ಯಕ್ಷ ಸಂಜೀವರೆಡ್ಡಿಯವರ ಮುಂತ್ತಿನಂಥ ಮಾತುಗಳಿವು.

ಸಂಜೀವರೆಡ್ಡಿಯವರು ಇವಕ್ಕೆಲ್ಲ ಪರಿಹಾರವನ್ನು ಸೂಚಿಸಿದ್ದಾರೆ. "ನಿರುದ್ಯೋಗ ಮತ್ತು ಅದಕ್ಕೆ ಸಂಬಂಧಿಸಿದ ಸಮಸ್ಯೆಗಳು ಸಮಾಜದ ಯಾವುದೊಂದು ಗುಂಪಿನ ಜನ ಸೃಷ್ಟಿಸಿದ ಸಮಸ್ಯೆಗಳಲ್ಲ. ಅನೇಕ ಕಾರಣಗಳಿಂದಾಗಿ ವರ್ಷವರ್ಷಕ್ಕೆ ಪರಿಸ್ಥಿತಿ ಬಿಗುವಾಗುತ್ತಾ ಬಂದಿದೆ" ಎಂಬ ಸಂಜೀವರೆಡ್ಡಿಯವರ ಅಭಿಪ್ರಾಯವನ್ನು ನಾವು ಒಪ್ಪಿಕೊಳ್ಳಲು ಸಾಧ್ಯವಿಲ್ಲ.

ಸಮಾಜವು ಎರಡು ವರ್ಗಗಳಾಗಿ ವಿಭಜಿಸಲ್ಪಟ್ಟಿದೆ. ಒಂದು ಬಂಡವಾಳಶಾಹಿ ವರ್ಗ, ಮತ್ತೊಂದು ದುಡಿಯುವ ವರ್ಗ. ಬಂಡವಾಳಶಾಹಿ ವರ್ಗ ಜನರನ್ನು ಸುಲಿದು ತನ್ನ ಬಂಡವಾಳವನ್ನು ಹೆಚ್ಚಿಸಿಕೊಳ್ಳುತ್ತದೆ. ಅದಕ್ಕಾಗಿ ರಾಜಕೀಯ ಅಧಿಕಾರವನ್ನು ತನ್ನ ಅಂಕಿತದಲ್ಲಿಟ್ಟುಕೊಳ್ಳುತ್ತದೆ. ತನ್ನ ಆರ್ಥಿಕ-ರಾಜಕೀಯ ನೀತಿಯನ್ನು ಅಧಿಕಾರಿಗಳ ಮೂಲಕ ಚಲಾಯಿಸುತ್ತದೆ. ಕಾರ್ಯಾಂಗ, ನ್ಯಾಯಾಂಗ, ಪೋಲೀಸರನ್ನೆಲ್ಲ ತನ್ನ ಅಂಕಿತದಲ್ಲಿಟ್ಟುಕೊಂಡು, ದುಡಿಯುವ ಜನತೆಯನ್ನು ಹತ್ತಿಕ್ಕಿ, ಸುಲಿದು ಮಣ್ಣುಪಾಲು ಮಾಡುತ್ತದೆ. ಈ ಕಾರಣದಿಂದಲೇ ಕಳೆದ ಮೂವತ್ತು ವರ್ಷಗಳಲ್ಲಿ ನಮ್ಮ ದೇಶದಲ್ಲಿ ಶ್ರೀಮಂತರು ಶ್ರೀಮಂತರಾಗುತ್ತಲೇ ಇದ್ದಾರೆ, ಬಡವರು ಬಡವರಾಗುತ್ತಿದ್ದಾರೆ. ದೇಶದ ಸಂಪತ್ತು ಕೆಲವೇ ಜನರ ಸೊತ್ತಾಗುಳಿದಿದೆ.

ಇಂಥ ಗಂಭೀರ ಪರಿಸ್ಥಿತಿಗೆ ಸಮಾಜದ ಯಾವುದೋ ಒಂದು ಗುಂಪು ಕಾರಣವಲ್ಲೆಂದು ಸಂಜೀವರೆಡ್ಡಿಯವರು ಹೇಳುವ ಮಾತು ಸರಿಯಲ್ಲ. ಸಮಾಜದ ಒಂದು ಗುಂಪು, ಬಂಡವಾಳಶಾಹಿವರ್ಗ, ಅವರನ್ನು ಪ್ರತಿನಿಧಿಸುವ ಇಂದಿರಾ ಕಾಂಗ್ರೆಸ್, ಅವರ ಆರ್ಥಿಕ-ರಾಜಕೀಯ ನೀತಿಯೇ ದೇಶದಲ್ಲಿ ಬಡತನ, ನಿರುದ್ಯೋಗ, ನಿರಕ್ಷರತೆ, ಔದ್ಯೋಗೀಕರಣೆಯಲ್ಲಿ ಹಿನ್ನಡೆ, ಹಳ್ಳಿಗಾಡು ಪ್ರದೇಶಗಳ ಹಿಂದುಳಿದಿರುವಿಕೆ, ಹಾಗೂ ದೇಶದ ಸಂಪತ್ತು ಕೆಲವೇ ಗುತ್ತೇದಾರಿ ಬಂಡವಾಳದಾರರ ಸೊತ್ತಾಗುಳಿಯಲು ಮುಖ್ಯಕಾರಣ. ಈ ಸಂಗತಿ ಸಂಜೀವರೆಡ್ಡಿಯವರಿಗೆ ಗೊತ್ತಿಲ್ಲವೆಂದಲ್ಲ. ಆದರೆ ಬಂಡವಾಳಶಾಹಿ ವರ್ಗದ ಪ್ರತಿನಿಧಿಯಾದ ತಾನು ತನ್ನ ವರ್ಗವೇ ಇದಕ್ಕೆಲ್ಲ ಕಾರಣವೆಂದು ಹೇಳುವ ಧೈರ್ಯ ಮಾತ್ರ ಎಲ್ಲಿಂದ ಬರಬೇಕು.

"ಒಂದು ಸಾವಿರ ರೂಪಾಯಿ ಸಂಬಳ ಸಿಗುವವರೆಲ್ಲ ಕೆಲವು ಕಾಲದ ಮಟ್ಟಿಗಾದರೂ ಪುರಸ್ಕಾರ ಹೂಡುವುದನ್ನೂ, ಚಳುವಳಿ ಮಾಡುವುದನ್ನೂ ನಿಲ್ಲಿಸಬೇಕೆಂದು ಸಂಜೀವರೆಡ್ಡಿಯವರ ಸೂಚನೆ. ಅದೇ ಉಸಿರಿನಲ್ಲಿ "ಅತಿ ಪ್ರಸರಣದಿಂದಾಗಿ ಇಂಥ ಜನರ ಮೇಲೂ ಕೆಟ್ಟ ಪರಿಣಾಮವಾಗಿದೆಂದು ನನಗೆ ಮನದಟ್ಟಾಗಿದೆ. ಆದರೆ ಇವರಿಗಿಂತಲೂ ಕೆಟ್ಟಮಟ್ಟದಲ್ಲಿರುವ ಬಹುಸಂಖ್ಯ ಜನರ ಪರಿಸ್ಥಿತಿ ಎಷ್ಟು ಕೆಟ್ಟಿದೆ? ಬಡತನದ ರೇಖೆಗಿಂತಲೂ ಕೆಳಮಟ್ಟದಲ್ಲಿರುವವರಿಗೆ ನಾವು ಸಹಾಯ ಮಾಡುವುದು ಬೇಡವೇ? ಅವರೆಲ್ಲ ನಮ್ಮ ಅರ್ಧ ಮಟ್ಟಕ್ಕಾದರೂ ಬರುವಂತೆ ಮಾಡಬೇಕಲ್ಲವೇ" ಎಂದು ಸಂಜೀವರೆಡ್ಡಿಯವರು ಅಂಗಲಾಚಿ ಬೇಡಿಕೊಂಡಿದ್ದಾರೆ.

1976ರಲ್ಲಿ ದೇಶದ ಶೇ. 5ರಷ್ಟು ಜನ ಉತ್ಪನ್ನದ 22.6 ರಷ್ಟು ಪಾಲನ್ನು ಗಳಿಸಿದ್ದಾರೆಂದೂ, 1964ರಲ್ಲಿದ್ದ 200ಕೋಟಿ ಬಂಡವಾಳದ ಸಂಸ್ಥೆಗಳು 42ರಿಂದ 1976ರಲ್ಲಿ 101ರಷ್ಟಾಗಿವೆಂದು ಸಂಜೀವರೆಡ್ಡಿಯವರೇ ಹೇಳುವಾಗ, ಬಹುರಾಷ್ಟ್ರೀಯ, ರಾಷ್ಟ್ರೀಯ ಗುತ್ತೇದಾರಿ ಸಂಸ್ಥೆಗಳ ಲಾಭದ ವಿಷಯದಲ್ಲಾಗಲೀ. ಈ ಸಂಸ್ಥೆಗಳಲ್ಲಿರುವ ಡೈರೆಕ್ಟರರು, ಮೇಲ್ಮಟ್ಟದ ಅಧಿಕಾರಿಗಳು ಪಡೆಯುತ್ತಿರುವ ಸಂಬಳ, ಮತ್ತಿನ್ನಿತರ ಸೌಲಭ್ಯಗಳ ಕುರಿತಾಗಲೀ ಅಭಿಪ್ರಾಯ ವ್ಯಕ್ತಮಾಡುವ ಧೈರ್ಯ ಸಂಜೀವರೆಡ್ಡಿಯವರಿಗಿಲ್ಲ. ಕೋಟ್ಯಾವಧಿ ರೂಪಾಯಿ ಲಾಭಗಳಿಸುವ, ಲಕ್ಷಾವಧಿ ರೂಪಾಯಿ ಸಂಬಳ ಇತರ ಸೌಲಭ್ಯಗಳನ್ನು ಪಡೆಯುವ ಕಂಪೆನಿ ಮಾಲಕರ, ಅಧಿಕಾರಿಗಳ, ಡೈರೆಕ್ಟರರ ಮೇಲೆ ಸಂಜೀವರೆಡ್ಡಿಯವರ ಕಣ್ಣು ಬೀಳದೆ, ಅತಿ ಪ್ರಸರಣ, ಬೆಲೆ ಏರಿಕೆ ಮತ್ತಿನ್ನಿತರ ಹಲವಾರು ಸಮಸ್ಯೆಗಳನ್ನೆದುರಿಸುತ್ತಿರುವ ಮಾಹೆಯಾನ ಒಂದು ಸಾವಿರ ರೂಪಾಯಿಗಳಿಸುವ ಜೀವವಿಮೆ, ಬ್ಯಾಂಕ ಮೊದಲಾದ ನೌಕರರ ಮೇಲೆ ರಾಷ್ಟ್ರಪತಿಗಳ ವಕ್ರದೃಷ್ಟಿ ಬಿದ್ದಿರುವುದನ್ನು ನೋಡುವಾಗ ಬಡವರ ಮೇಲಿನ ಕನಿಕರಕ್ಕಿಂತಲೂ ತಮ್ಮ ವರ್ಗದ ಹಿತಸಾಧನೆಯೇ ಅವರಿಗೆ ಪ್ರಾಧಾನ್ಯವೆಂಬುದನ್ನು ಇದು ಸ್ಪಷ್ಟವಾಗಿ ತೋರಿಸಿಕೊಡುತ್ತದೆ.

ತಾವು ಇತ್ತೀಚೆಗೆ ಬರಗಾಲ ಪೀಡಿತ ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಗೆ ಭೇಟಿಯಿತ್ತಾಗ ಹಳ್ಳಿಗಳಲ್ಲಿ ದುಡಿಯುತ್ತಿರುವ ಕೃಷಿ ಕಾರ್ಮಿಕರಿಗೆ ರೂ. 2.50 ದಿನಗೂಲಿ ಸಿಗುತ್ತಿದೆಂದೂ, ಅದು ಕೂಡ ಕೆಲಸವಿದ್ದ ದಿನಗಳಲ್ಲಷ್ಟೆ ಸಿಗುತ್ತದೆಂಬ ಸಂಗತಿ ತಿಳಿಯಿತಂತೆ.

ಸ್ವಾತಂತ್ರ್ಯ ದೊರೆತ 30 ವರ್ಷಗಳಲ್ಲಿ ಇಂದು ರಾಷ್ಟ್ರಪತಿಯಾಗಿರುವ ಸಂಜೀವರೆಡ್ಡಿಯವರು ಅದೇ ಆಂಧ್ರ ಪ್ರದೇಶದ ಮುಖ್ಯಮಂತ್ರಿಯಾಗಿದ್ದಾಗ ಕೃಷಿ ಕಾರ್ಮಿಕರ ಸಂಬಳ ಹೆಚ್ಚಿಸಲು ಏನು ಮಾಡಿದರು? ಹಾಗೆಯೇ ತನ್ನ ರಾಜಕೀಯ ಜೀವನದ ಹೆಚ್ಚಿನ ವರ್ಷಗಳನ್ನು ಕಾಂಗ್ರೆಸ್ಸಿನಲ್ಲೂ, ಹಲವಾರು ವರ್ಷಗಳನ್ನು ಸಂಸ್ಥಾ ಕಾಂಗ್ರೆಸ್ಸಿನಲ್ಲೂ, ಅನಂತರ ರಾಷ್ಟ್ರಪತಿಯಾಗಿಯೂ ಸೇವೆ ಸಲ್ಲಿಸುತ್ತಿದ್ದಾಗ ದೇಶದ ಜನತೆ ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ಯಾವ ಉಪಾಯಗಳನ್ನು ಸೂಚಿಸಿದ್ದಾರೆ?

ಪಶ್ಚಿಮ ಬಂಗಾಲ, ತ್ರಿಪುರಾಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಮುಖಂಡತ್ವದಲ್ಲಿಯ ಎಡರಂಗ ಸರಕಾರವೂ, ಕೇರಳದಲ್ಲಿ ಎಡ ಮತ್ತು ಪ್ರಜಾಪ್ರಭುತ್ವರಂಗದ ಸರಕಾರವೂ 1977 ಮತ್ತು 1980 ರಿಂದ ಹೊಸ ತರದ ಆಡಳಿತೆ ನಡೆಸುತ್ತಿದೆ. ಇಂದಿರಾ ಕಾಂಗ್ರೆಸ್ ಸರಕಾರದ ಆಂಧ್ರ ಪ್ರದೇಶ, ಕರ್ನಾಟಕ ಮತ್ತಿತರ ರಾಜ್ಯಗಳಲ್ಲಿ ಕೃಷಿ ಕಾರ್ಮಿಕರ ದಿನಗೂಲಿ ರೂ. 2.50 ಇರುವಾಗ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಮುಖಂಡತ್ವದ 3 ರಾಜ್ಯಗಳಲ್ಲಿ ಗ್ರಾಮಾಂತರ ಪ್ರದೇಶದ ಕೃಷಿಕೂಲಿಗಾರರಿಗೆ ದಿನಗೂಲಿ ರೂ. 10 ರಿಂದ 15 ಸಿಗುತ್ತಿದೆ. ಅಷ್ಟೇ ಅಲ್ಲ ಕೆಲಸವಿಲ್ಲದ ದಿನಗಳಲ್ಲಿ ಇವರಿಗೆ ಬೇರೆ ಉದ್ಯೋಗಾವಕಾಶ ಮಾಡಿಕೊಟ್ಟಿದೆ. ಇಂದಿರಾ ಕಾಂಗ್ರೆಸ್ ಆಳುವ ರಾಜ್ಯಗಳಲ್ಲಿ ಹಬ್ಬ-ಹುಣ್ಣಿಮೆ ದಿವಸಗಳಲ್ಲೂ ಅತ್ಯಾವಶ್ಯಕ ವಸ್ತುಗಳು ಅಗ್ಗದರದಲ್ಲಿ ಲಭ್ಯವಾಗದಿದ್ದಾಗ, ಮೇಲಿನ 3 ರಾಜ್ಯಗಳಲ್ಲಿ ಸರಕಾರ ಜವಾಬ್ದಾರಿ ಹೊತ್ತು ಅಗ್ಗದರದ ಅಂಗಡಿಗಳ ಮೂಲಕ ಕಡಿಮೆ ಧಾರಣೆಯಲ್ಲಿ ಅಗತ್ಯವಸ್ತುಗಳನ್ನು ಪೂರೈಸುವ ವ್ಯವಸ್ಥೆ ಮಾಡಿದೆ, ಮಾಡುತ್ತಿದೆ. ಕೆಲವು ವಸ್ತುಗಳನ್ನು ಕೇಂದ್ರ ಸರಕಾರವೇ ಒದಗಿಸಬೇಕಾಗಿರುವುದರಿಂದ ಇಂದಿರಾ ಕಾಂಗ್ರೆಸ್ ಕೇಂದ್ರ ಸರಕಾರ ಬೇಜವಾಬ್ದಾರಿಯಿಂದ ವರ್ತಿಸುತ್ತಿರುವುದರಿಂದ ವಸ್ತುಗಳು ಲಭ್ಯವಾಗದೆ ಈ ಮೂರು ಸರಕಾರಗಳು ತಾವು ಜನತೆಗಿತ್ತ ಆಶ್ವಾಸನೆಗಳನ್ನು 12 ತಿಂಗಳೂ ಪೂರೈಸಲಿಕ್ಕೆ ಸಾಧ್ಯವಾಗುತ್ತಿಲ್ಲ.

ಅಕ್ಕಿ, ಗೋಧಿ, ಜೋಳ, ಎಣ್ಣೆ, ಬಟ್ಟೆ, ಸಾಬೂನು, ಬೇಳೆ, ಕಟ್ಟಿಗೆ ಮೊದಲಾದ 13-14 ಅತ್ಯಾವಶ್ಯಕ ವಸ್ತುಗಳನ್ನು ಒದಗಿಸುವ ಜವಾಬ್ದಾರಿಯನ್ನು ಕೇಂದ್ರ ಸರ್ಕಾರ ವಹಿಸಿಕೊಂಡು ರಾಜ್ಯಗಳಿಗೆ ಪೂರೈಸಿ ಅಗ್ಗದರದ ಅಂಗಡಿಗಳ ಮೂಲಕ ಅವುಗಳನ್ನು ಒದಗಿಸುವ ವ್ಯವಸ್ಥೆ ಮಾಡಬೇಕೆಂದೂ, ಕೆಲವು ಮಟ್ಟಿಗಾದರೂ ಇದರಿಂದ ಬೆಲೆಯೇರಿಕೆಯನ್ನು, ಕಳ್ಳ ವ್ಯಾಪಾರವನ್ನೂ ತಡೆಗಟ್ಟಲು ಸಾಧ್ಯವಾಗುವುದೆಂದೂ, ಪ. ಬಂಗಾಲದ ಮುಖ್ಯಮಂತ್ರಿ ಜ್ಯೋತಿಬಸು ಅವರು 1977ರಲ್ಲೇ ಮುಖ್ಯಮಂತ್ರಿಗಳ ಸಭೆಯಲ್ಲಿ ಸೂಚಿಸಿದ್ದರು. ಲಾಭಖೋರರ ಕಳ್ಳವ್ಯಾಪಾರಿಗಳ ಹಿತಸಾಧಿಸುವ ಇಂದಿರಾ ಇದಕ್ಕೆ ಗಮನ ಕೊಟ್ಟಿಲ್ಲ.

ಹಾಗೆಯೇ ಕಾಂಗ್ರೆಸ್ಸಿನ 30 ವರ್ಷಗಳ ಆಳ್ವಿಕೆಯಲ್ಲಿ 5 ಪಂಚವಾರ್ಷಿಕ ಯೋಜನೆ ಮುಗಿದಿವೆ. ಆದರೆ ದೇಶದ ಮತ್ತು ಜನತೆಯ ಮೂಲಭೂತ ಸಮಸ್ಯೆಗಳಿಗೆ ಮಾತ್ರ ಪರಿಹಾರ ಸಿಕ್ಕಿಲ್ಲ. ಬೆಲೆಯೇರಿಕೆ, ನಿರುದ್ಯೋಗ ಸಮಸ್ಯೆ, ಬಡತನ ಮೊದಲಾದವುಗಳು ಉಲ್ಬಣಗೊಳ್ಳುತ್ತ ಹೊರಟಿವೆ. ಈ ಯೋಜನೆಗಳು ಮೂಲಭೂತವಾಗಿ ಬದಲಾವಣೆಯಾಗಬೇಕೆಂದೂ, ವಿಚಾರಸರಣಿ, ಬೇರೆ ಬೇರೆ ಕೆಲಸಗಳಿಗೆ ಬಂಡವಾಳ ವಿತರಣೆ, ಕೇಂದ್ರ-ರಾಜ್ಯ ಸಂಬಂಧ, ಕರ ಹೇರುವ ನೀತಿ ಮೊದಲಾದ ವಿಷಯಗಳ ಕುರಿತು ಆಳುವ ಕಾಂಗ್ರೆಸ್ ನಿರೂಪಣೆಗೂ, ತಮ್ಮ 3 ರಾಜ್ಯಗಳ ನಿಲುವಿಗೂ ವ್ಯತ್ಯಾಸ ಇರುವುದರಿಂದ, ಅಂಥ ತಿದ್ದುಪಡಿಯಾಗುವ ತನಕ 6ನೇ ಪಂಚವಾರ್ಷಿಕ ಯೋಜನೆಗೆ ಬೆಂಬಲ ಕೊಡಲು ಸಾಧ್ಯವಿಲ್ಲವೆಂದು ಯೋಜನೆಯ ಕುರಿತು ಕರೆದ ಮುಖ್ಯಮಂತ್ರಿಗಳ ಸಭೆಯಲ್ಲಿ ಜ್ಯೋತಿಬಸು, ನಾಯನಾರ, ಚಕ್ರವರ್ತಿಯವರು ಭಿನ್ನಾಭಿಪ್ರಾಯ ವ್ಯಕ್ತಮಾಡಿದ ಸಂಗತಿಯನ್ನು ಸಂಜೀವರೆಡ್ಡಿಯವರು ಉಲ್ಲೇಖಿಸುವ ಅಗತ್ಯವಿತ್ತು.

ಬಂಡವಾಳಶಾಹಿಪರ ತಮ್ಮ ರಾಜಕೀಯ, ಆರ್ಥಿಕ, ಸಾಮಾಜಿಕ ನೀತಿಗಳಿಂದಾಗಿಯೇ ಉತ್ಪಾದನೆ, ವಿತರಣೆ, ಬೆಲೆಯೇರಿಕೆ, ಅತಿಪ್ರಸರಣ, ನಿರುದ್ಯೋಗ ಸಮಸ್ಯೆ ಮುಂತಾದವುಗಳನ್ನು ಪರಿಹರಿಸಲು ಶಕ್ಯವಾಗಿಲ್ಲ ಕಾರಣ ವಿರೋಧಿ ಪಕ್ಷಗಳ 3 ರಾಜ್ಯಗಳ ಆಡಳಿತೆಯ ಅನುಭವವನ್ನು

(5ನೇ ಪುಟ ನೋಡಿ)

ಮೀರತ್ ಮೊಕದ್ದಮೆ

(ಹಿಂದಿನ ಸಂಚಿಕೆಯಿಂದ)

ವಿದೇಶಿ ಏಜಂಟರು, ಆಸ್ತಿ ಹಕ್ಕಿನ ವಿರೋಧಿಗಳು ಎಂದು ಪ್ರಚಾರಮಾಡಿ ಬೇರೆ ವಿಭಾಗದ ಬೆಂಬಲವನ್ನು ಪಡೆಯಲು ಬ್ರಿಟಿಷರು ಯತ್ನಿಸಿದರು. ಅದೇ ತಾನೇ ಹುಟ್ಟಿದ್ದ ಕಮ್ಯುನಿಸ್ಟ್ ಪಕ್ಷವನ್ನು ಹೊಸಕಿಹಾಕಲು ಕಮ್ಯುನಿಸ್ಟ್ ಮುಖಂಡರನ್ನು ಬಂಧಿಸಲಾಯಿತು. ಕಾನ್ಪುರದಲ್ಲಿ ಮೊಕದ್ದಮೆ ಪ್ರಾರಂಭವಾಯಿತು. ಈ ಮೊಕದ್ದಮೆ "ಕಾನ್ಪುರ ಒಳಸಂಚು ಮೊಕದ್ದಮೆ" ಎಂದು ಖ್ಯಾತವಾಗಿದೆ.

ಈ ಮೊಕದ್ದಮೆ ನಡೆಯುತ್ತಿರುವಾಗ, ಭಾರತದ ಕಮ್ಯುನಿಸ್ಟ್ ಚಳುವಳಿಯ ನೇತಾರರು ಮತ್ತು ಸಂಸ್ಥಾಪಕರು ಎಂದು ಹೇಳಲಾದ ಪ್ರಮುಖರಿಬ್ಬರ ನಿಜಬಣ್ಣ ಬದಲಾಯಿತು.

ಸೈದ್ಧಾಂತಿಕ ನಿಷ್ಠೆಗೆ ಅವಮಾನ ಮಾಡಿದ, ವಿಶ್ವಾಸ ದ್ರೋಹಮಾಡಿದ ಈ ಪ್ರಮುಖರೇ ಎಸ್. ಎ. ಡಾಂಗೆ ಮತ್ತು ನಳಿನಿಭೂಷಣ್‌ಗುಪ್ತಾ. ಇವರಿಬ್ಬರೂ ಆಗಿನ ಬ್ರಿಟಿಷ್ ಸರಕಾರಕ್ಕೆ "ನಮ್ಮನ್ನು ಕ್ಷಮಿಸಿ ಬಿಟ್ಟುಬಿಡಿ, ನಾವು ಇನ್ನು ಮೇಲೆ ಕಮ್ಯುನಿಸ್ಟ್ ಚಳುವಳಿಗೆ ಸೇರುವುದಿಲ್ಲ. ನಾವು ನಿಮ್ಮ ನಮ್ರಸೇವಕರು" ಎಂದು ಮನವಿಸಲ್ಲಿಸಿದರು ಇಷ್ಟೇ ಅಲ್ಲ, 1924 ಜೂನ್ ತಿಂಗಳ 28ರಂದು ಆಗಿನ ಬ್ರಿಟಿಷ್ ಸರಕಾರದ ಗವರ್ನರ್ ಜನರಲ್‌ನಿಗೆ ಎಸ್. ಎ. ಡಾಂಗೆ ಬರೆದಿರುವ ಪತ್ರ, ನಿಜವಾಗಿ ಎಲ್ಲ ಕಮ್ಯುನಿಸ್ಟರೂ ತಲೆತಗ್ಗಿಸಬೇಕಂತಾದ್ದು. "ನಿಮ್ಮ ಘನ ಸರಕಾರದವರು ನನ್ನನ್ನು ಬಿಟ್ಟುಬಿಟ್ಟರೆ, ಕಮ್ಯುನಿಸ್ಟ್ ಪಾರ್ಟಿಯಲ್ಲಿ ನನ್ನ ಸ್ಥಾನಮಾನಗಳನ್ನು ಉಪಯೋಗಿಸಿ ನಿಮ್ಮ ಸರಕಾರಕ್ಕೆ ಎಲ್ಲ ವಿಧವಾದ ಪಾರ್ಟಿಯ ರಹಸ್ಯ (ಭಾರತದಲ್ಲಿ ಮತ್ತು ವಿದೇಶದಲ್ಲಿ) ಗಳನ್ನು ತಿಳಿಸುತ್ತೇನೆ" ಎಂದು ಸರಕಾರಕ್ಕೆ ಪತ್ರ ಬರೆದಿದ್ದರು. ಈ ಡಾಂಗೆ ಮಹಾಶಯ "ಭಾರತದಲ್ಲಿ ಕೆಂಬಾವುಟ ಹಾರಿಸಿದವರಲ್ಲಿ ತಾನೇ ಮೊದಲಿಗ" ಎಂದು ತಮ್ಮ ಮಗಳಾದ ರೋಜಾದೇಶಪಾಂಡೆ ನೇತೃತ್ವದ ಅಖಿಲಭಾರತ ಕಮ್ಯುನಿಸ್ಟ್ ಪಾರ್ಟಿ ಸಮ್ಮೇಳನದಲ್ಲಿ ಕೊಚ್ಚಿಕೊಂಡಿದ್ದಾರೆ. ಈ ವಿಶ್ವಾಸದ್ರೋಹಿಯೇ ಅನೇಕ ವರ್ಷ ಕಮ್ಯುನಿಸ್ಟ್ ಚಳುವಳಿಯ ಪ್ರಮುಖನಾಗಿ ಮೆರೆದದ್ದು ನಿಜಕ್ಕೂ ವಿಷಾದನೀಯ. (ಇದು ಕೇವಲ ಆರೋಪವಲ್ಲ. ದೆಹಲಿಯ JNUವಿನ National Archive ನಲ್ಲಿ ಅಧಿಕೃತ ದಾಖಲೆಗಳಿವೆ.)

ಈ ಮೊಕದ್ದಮೆಯ ನಂತರ ಕಮ್ಯುನಿಸ್ಟರ ಪ್ರಭಾವ ಭಾರತದಲ್ಲಿ ಕಡಿಮೆ ಆಗಲಿಲ್ಲ, ಬದಲು ಹೆಚ್ಚಾಯಿತು. ದೇಶದಲ್ಲಿ ಆರ್ಥಿಕ ಬಿಕ್ಕಟ್ಟು ಹೆಚ್ಚಾಗಿ ಕಾರ್ಮಿಕರು ಮತ್ತು ಇತರೆ ವಿಭಾಗದ ಜನ ಹೋರಾಟದ ದಾರಿಯನ್ನು ಹಿಡಿದರು. ಗಿರಣಿ(Textile) ಮಾಲೀಕರು ಮತ್ತು ಇತರ ಬಂಡವಾಳಶಾಹಿಗಳು ಕಮ್ಯುನಿಸ್ಟರನ್ನು ಸದೆಬಡಿಯಬೇಕೆಂದು ಬ್ರಿಟಿಷ್ ಸರಕಾರವನ್ನು ಒತ್ತಾಯಿಸಿದರು. ಕಮ್ಯುನಿಸ್ಟರನ್ನು ತುಳಿದುಹಾಕುವ ದೃಢ ನಿರ್ಧಾರದಿಂದ "ಮೀರತ್ ಒಳಸಂಚು ಮೊಕದ್ದಮೆ"ಯನ್ನು ಯೋಜಿಸಿದರು. ಆಪಾದಿತರಿಗೆ ಶಿಕ್ಷೆಯಾಗಲೇಬೇಕು; ತಪ್ಪಿಸಿಕೊಳ್ಳಲು ಯಾವುದೇ ಅವಕಾಶವಿರಲೇಕೂಡದು ಎಂಬ ದಿಸೆಯಲ್ಲೇ ಪ್ರಯತ್ನಗಳು ನಡೆದವು. ಆಪಾದಿತರಿಗೆ ಯಾವುದೇ ರೀತಿಯ ನೆರವು ದೊರೆಯಬಾರದು ಎಂಬ ಕಾರಣದಿಂದ ಮೀರತ್ ಮೊಕದ್ದಮೆಗೆ ಪ್ರಾರಂಭಿಸಲು ಆಯ್ಕೆ ಮಾಡಲಾಯಿತು.

1929 ಮಾರ್ಚ್ 20ರಂದು ಪ್ರಮುಖ ನಗರಗಳಾದ ಕಲಕತ್ತೆ, ಬೊಂಬಾಯಿ, ಲಾಹೋರ್ ಮೊದಲಾದ ಕಡೆ ಪ್ರಮುಖ ಕಮ್ಯುನಿಸ್ಟ್ ನಾಯಕರನ್ನು ಬಂಧಿಸುವ ಸಲುವಾಗಿ ದಾಳಿಗಳು ಮತ್ತು ಶೋಧಗಳು ನಡೆಸಲ್ಪಟ್ಟವು. ಕಾಗದಪತ್ರಗಳನ್ನು ವಶಪಡಿಸಿಕೊಳ್ಳಲಾಯಿತು. ಮಾರ್ಚ್ 20ರಂದು 31 ಜನರನ್ನು ಬಂಧಿಸಲಾಯಿತು. ಲೀಸ್ಟರ ಹಿಟನ್‌ಸನ್ ಎಂಬವರನ್ನು ನಂತರ ಬಂಧಿಸಲಾಯಿತು. ಇನ್ನು ಅನೇಕರನ್ನು ಬಂಧಿಸುವ ಕಾರ್ಯಕ್ರಮವಿತ್ತು. ಆದರೆ ಪಟ್ಟಿಯಲ್ಲಿದ್ದ ಕೆಲವರು ಭಾರತದಲ್ಲಿ ಇರಲಿಲ್ಲ. ಬಂಧಿತರಲ್ಲಿ ಕೆಲವರು ಬ್ರಿಟನ್ ಕಮ್ಯುನಿಸ್ಟ್ ಪಾರ್ಟಿಗೆ ಸೇರಿದವರಾಗಿದ್ದರು. ಬಂಧಿತರಲ್ಲಿ ಪ್ರಮುಖರೆಂದರೆ ಮುಜಾಫರ್ ಅಹಮ್ಮದ್, ಫಿಲಿಪ್ಸ್ ಸ್ಪ್ರಾಟ್, ಮಿರಜಕರ, ಎಸ್. ಎ. ಡಾಂಗೆ, ಜೋಗಳೇಕರ, ಪಿ. ಸಿ. ಜೋಶಿ, ಸೋಹನ್ ಸಿಂಗ್ ಜೋಶ್ ಮೊದಲಾದವರು. ಬ್ರಿಟಿಷ್ ಸರಕಾರವನ್ನು ಉರುಳಿಸುವ ಸಂಚು ನಡೆಸಿದ್ದಾರೆ ಎಂಬ ಆರೋಪದ ಮೇಲೆ (IPC 121 A) ಮೊಕದ್ದಮೆ ಹೂಡಲಾಯಿತು.

ಬಂಧಿಸಿದ ಮೂರು ತಿಂಗಳ ನಂತರ ಜೂನ್ 12, 1929ರಂದು ವಿಶೇಷ ಮ್ಯಾಜಿಸ್ಟ್ರೇಟರ ಎದುರು ವಿಚಾರಣೆ ಪ್ರಾರಂಭವಾಯಿತು. ಸರಕಾರದ ಪರ ವಾದಮಾಡಿದ ಸರ್ ಲ್ಯಾಂಗ್‌ಫರ್ಡ್ ಜೇಮ್ಸರು ತಮ್ಮ ಅದ್ಭುತವಾದ ಶಕ್ತಿಯಿಂದ 16 ದಿವಸಗಳ ಕಾಲ ವಾದಮಾಡಿದರು. ಮ್ಯಾಜಿಸ್ಟ್ರೇಟರು ಅತಿ ಜಾಣತನದಿಂದ ಸೆಷನ್ ಕೋರ್ಟಿಗೆ ವರ್ಗಾಯಿಸಿ ತಮ್ಮ ಹೊಣೆ ತಪ್ಪಿಸಿಕೊಂಡರು. ಆಪಾದಿತರು ತಮ್ಮ ರಕ್ಷಣೆಯ ಹೊಣೆ ತಾವೇ ಮಾಡಿಕೊಂಡರು.

ಆಪಾದಿತರು ಜೈಲಿನಲ್ಲಿರುವಾಗ ಒಂದು ಪ್ರಮುಖ ಬದಲಾವಣೆ ಉಂಟಾಯಿತು. ಆಪಾದಿತರಲ್ಲಿ 3 ಗುಂಪುಗಳಾದವು. ಒಂದು ಗುಂಪು ತಾವು ಕಮ್ಯುನಿಸ್ಟರಲ್ಲವೆಂದೂ, ಇನ್ನೊಂದು ಗುಂಪು ತಾವು ಕಮ್ಯುನಿಸಂನ್ನು ಒಪ್ಪುತ್ತೇವಾದರೂ ಕಮ್ಯುನಿಸ್ಟರಲ್ಲವೆಂದೂ, ಇನ್ನೊಂದು ಗುಂಪು ತಾವು ಕಮ್ಯುನಿಸ್ಟರೇ ಎಂದು ಈ ರೀತಿ ವಿಭಾಗಗಳಾದರು. ಎಸ್ ಎ. ಡಾಂಗೆ ಕಮ್ಯುನಿಸ್ಟ್ ಗುಂಪಿನಲ್ಲಿ ಇರಲಿಲ್ಲ. ಇದು ರಾಜಕೀಯದ ದೃಷ್ಟಿಯಿಂದ ಮುಖ್ಯವಾದದ್ದು. ನಾವು ಕಮ್ಯುನಿಸ್ಟರೇ ಎಂದು ಘೋಷಿಸಿಕೊಂಡ ಗುಂಪು, ಕಮ್ಯುನಿಸಂನ್ನು ಧೈರ್ಯದಿಂದ ಸಮರ್ಥಿಸಲು ತೀರ್ಮಾನಿಸಿತು. 1930 ಜನವರಿ 14ನೇ ತಾರೀಖು ವಿಚಾರಣೆ ಪ್ರಾರಂಭವಾಗಿ 1933 ಆಗಸ್ಟ್ 3ರಂದು ಕೊನೆಗೊಂಡಿತು. ಸಾಮ್ರಾಜ್ಯಶಾಹಿ ವಿರೋಧಿ ಘೋಷಣೆಗಳನ್ನು ಘೋಷಿಸುತ್ತಾ ವಿಚಾರಣೆಯನ್ನು ಎದುರಿಸಿದರು. ಧೈರ್ಯದಿಂದ ತಮ್ಮನ್ನು ತಾವು ಸಮರ್ಥಿಸಿಕೊಂಡರು.

ಸರಕಾರದ ಪರ ವಕೀಲರ ವಾದ ಕೊನೆಗೊಂಡ ನಂತರ ಆಪಾದಿತರ ಹೇಳಿಕೆ ತೆಗೆದುಕೊಳ್ಳಲು ಆರಂಭವಾಯಿತು. ಆಪಾದಿತರು ಮೊದಲೇ ನಿರ್ಧರಿಸಿಕೊಂಡಂತೆ ಕಮ್ಯುನಿಸ್ಟ್ ಸಿದ್ಧಾಂತದ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ನೀತಿಯನ್ನು ಪ್ರತಿಪಾದಿಸಿ, ಬಂಡವಾಳಶಾಹಿ ಪದ್ಧತಿಯ ಕ್ರೂರತನವನ್ನು, ಅದು ನಿರ್ಮಿಸಿರುವ ನ್ಯಾಯಾಂಗವನ್ನು ಮತ್ತು ಬಂಡವಾಳಶಾಹಿಯ ಅನಿವಾರ್ಯ ಸಾವನ್ನು ಪರಿಣಾಮಕಾರಿಯಾಗಿ ವಿವರಿಸಿದರು. ಆಪಾದಿತರು ಹೇಳಿಕೆ ನೀಡುತ್ತಾ "ಭಾರತದಲ್ಲಿರುವ ಬ್ರಿಟಿಷ್ ಸರಕಾರವನ್ನು ಮತ್ತು ಆದರಮೂರ್ಖ ವಕೀಲರನ್ನು ಅಭಿನಂದಿಸುತ್ತೇವೆ. ಏಕೆಂದರೆ ನಮ್ಮನ್ನು ಅಪರಾಧಿಗಳೆಂದು ವಾದಿಸುವ ಮುಖಾಂತರ ಕಮ್ಯುನಿಸಂ ಘನತೆಯನ್ನು ಹೆಚ್ಚಿಸಿದ್ದಾರೆ. ನಾವು ಹತ್ತು ವರ್ಷ ಹೊರಗಡೆ ಇದ್ದರೆ ಎಷ್ಟು ಸಾಧಿಸುತ್ತಿದ್ದೆವೋ ಅಷ್ಟನ್ನು ಸರ್ಕಾರ ನಮ್ಮನ್ನು ಜೈಲಿಗೆ ಹಾಕಿ 3 ವರ್ಷಗಳಲ್ಲಿ ಸಾಧಿಸಿದೆ" ಎಂದರು.

ವಿಚಾರಣೆ ಮುಗಿದ ಮೇಲೆ ನಿರೀಕ್ಷಿಸಿದ್ದ ಹಾಗೆ ಬ್ರಿಟಿಷ್ ನ್ಯಾಯಾಂಗ ಆಪಾದಿತರಿಗೆ ಶಿಕ್ಷೆವಿಧಿಸಿತು. ಆಪಾದಿತರಿಗೆ ಸರಕಾರದ ಈ ಕ್ರಮ ಅನಿರೀಕ್ಷಿತವಾಗಿರಲಿಲ್ಲ. ಅತಿ ಹೆಚ್ಚು ಶಿಕ್ಷೆಗೆ ಒಳಗಾದವರು ಕಾಂ. ಮುಜಾಫರ ಅಹಮ್ಮದರು.

ಯಾವುದೇ ರೀತಿಯ ತ್ಯಾಗಕ್ಕೆ ಸಿದ್ಧರಿದ್ದ ಯುವ ಕ್ರಾಂತಿಕಾರಿಗಳಿಗೆ ಶಿಕ್ಷೆ ಬಹಳ ಎಂದೆನಿಸಲಿಲ್ಲ. ಏಕೆಂದರೆ ಅಂಜುಬುರುಕರಿಂದ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಲು ಸಾಧ್ಯವೇ ಇಲ್ಲ.

—ಶ್ರೀರಾಂರೆಡ್ಡಿ

(ಮುಗಿಯಿತು)

ರಾಷ್ಟ್ರಪತಿಗಳ ಕಣ್ಣೀರು ! ಅದಕ್ಕೆ ಪರಿಹಾರವೇನು?

(4ನೇ ಪುಟದಿಂದ)

ಉಪಯೋಗಿಸಿಕೊಂಡು, ಯೋಜನೆ, ಕಾಯಿದೆ-ಕಾನೂನುಗಳಲ್ಲಿ ಮೂಲಭೂತ ಬದಲಾವಣೆ ಮಾಡುವ ಅವಶ್ಯಕತೆಯನ್ನು ಸಂಜೀವರೆಡ್ಡಿಯವರು ಸಮ್ಮೇಳನದಲ್ಲಿ ಒತ್ತಿ ಹೇಳುವ ಅವಶ್ಯಕತೆಯಿತ್ತು. ಹಾಗೆ ಮಾಡದೆ, ಸಂಧಾನ ಮತ್ತು ಸಹಕಾರ ಭಾವದಿಂದ ಒಂದಾಗಿ ವರ್ತಿಸಿ, ದೇಶವು ಎದುರಿಸುತ್ತಿರುವ- ಆರ್ಥಿಕ ಸಮಸ್ಯೆಗಳು ರಾಷ್ಟ್ರೀಯ ಸಮಸ್ಯೆಗಳೆಂದು ಪರಿಗಣಿಸಿರೆಂದು ಬುದ್ಧಿವಾದದ ಮಾತುಗಳನ್ನಾಡಿ. ಸ್ವಾತಂತ್ರ್ಯ ಹೋರಾಟ ಕಾಲದ ಧೈರ್ಯ ಒಕ್ಕಟ್ಟುಗಳಿಂದ ಈ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಅವರು ಕರೆಕೊಟ್ಟಿರುವುದನ್ನು ನೋಡುವಾಗ, ಹಾಗೂ ಇಂದಿರಾಗಾಂಧಿಯನ್ನು ಅತಿಯಾಗಿ ಹೊಗಳಿರುವುದನ್ನು ಕೇಳಿದಾಗ, ಸಂಜೀವರೆಡ್ಡಿಯವರು ದ್ವಿಮುಖ ಧೋರಣೆಯನ್ನನುಸರಿಸಿ ಜನರಿಗೆ ಮೋಸ ಮಾಡುತ್ತಿರುವಂತೆ ಕಂಡು ಬರುತ್ತದೆ.

ಇಂದಿರಾ ಕಾಂಗ್ರೆಸ್ಸಿನ 33 ವರ್ಷಗಳ ರಾಜಕೀಯ, ಆರ್ಥಿಕ-ಸಾಮಾಜಿಕ, ಶೈಕ್ಷಣಿಕ ಕಾರ್ಯಕ್ರಮಗಳ ವೈಫಲ್ಯತೆಯನ್ನು ಕಂಡ ಮೂರು ರಾಜ್ಯಗಳ ಜನತೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಮುಖಂಡತ್ವದಲ್ಲಿರುವ ಎಡ ಮತ್ತು ಪ್ರಜಾಪ್ರಭುತ್ವ ರಂಗದ ಕಾರ್ಯಕ್ರಮ ದೇಶದ ಸಮಸ್ಯೆಗಳ ಪರಿಹಾರಕ್ಕೆ ಬದಲಿ ಕಾರ್ಯಕ್ರಮವೆಂದು ಒಪ್ಪಿಕೊಂಡು ಇಂದಿರಾಗಾಂಧಿ ಪಕ್ಷವನ್ನು ಸೋಲಿಸಿರುವಾಗ. ಈ ಬದಲಿ ಕಾರ್ಯಕ್ರಮಗಳಿಂದ ರೈತ, ಕಾರ್ಮಿಕರ, ಸಾರ್ವಜನಿಕರ ಮುಖ್ಯ ಸಮಸ್ಯೆಗಳನ್ನು - ಈ ರಾಜ್ಯಗಳಿಗೆ ಸಂವಿಧಾನದಂತೆ ಹೆಚ್ಚಿನ ಅಧಿಕಾರ. ಸಂಪನ್ಮೂಲಗಳಿಲ್ಲದಿದ್ದರೂ ಕೂಡ–ಯಶಸ್ವಿಯಾಗಿ ಕಾರ್ಯರೂಪದಲ್ಲಿ ತಂದು ಪರಿಹಾರ ಒದಗಿಸಲಿಕ್ಕೆ ಸಾಧ್ಯತೆಯಿದೆ ಎಂಬುದನ್ನು ಪ್ರತ್ಯಕ್ಷವಾಗಿ ತೋರಿಸಿಕೊಟ್ಟಾಗ ಈ ಅಂಶವನ್ನು ಗಣನೆಗೆ ತೆಗೆದುಕೊಳ್ಳದಿರುವುದರ ಅರ್ಥವೇನು? ತಾನು ಅಧಿಕಾರದಲ್ಲಿರುವ ತನಕ ಮೊಸಳೆ ಕಣ್ಣೀರು ಸುರಿಸುತ್ತಿರುವುದೇ ರಾಷ್ಟ್ರಪತಿ ಸಂಜೀವರೆಡ್ಡಿಯವರ ಉದ್ದೇಶವಿದ್ದಂತೆ ಕಂಡು ಬರುತ್ತದೆ.

ಸದ್ಯದ ಪರಿಸ್ಥಿತಿಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಮುಖಂಡತ್ವದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ರಂಗವನ್ನು ಬಲಗೊಳಿಸಿ, ಆ ರಂಗದ ಸರಕಾರವನ್ನು ರಾಜ್ಯಗಳಲ್ಲಷ್ಟೇ ಅಲ್ಲ ಕೇಂದ್ರದಲ್ಲೂ ಸ್ಥಾಪಿಸಿದರೆ ಮಾತ್ರ ನಾವೆದುರಿಸುತ್ತಿರುವ, ಸಂಜೀವರೆಡ್ಡಿಯವರು ಸಮ್ಮೇಳನದಲ್ಲಿ ವ್ಯಕ್ತಮಾಡಿದ ಸಮಸ್ಯೆಗಳಿಗೆ ಪರಿಹಾರ ಸಿಗಲು ಸಾಧ್ಯ.

●

ಪುತ್ತೂರಿನ ಸರಕಾರಿ ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿನಿಯ ಸಂಶಯಾತ್ಮಕ ಸಾವು

ಕುಮಾರಿ ಸೀತಾ 18ವರ್ಷ ಪ್ರಾಯದ ನಿಮ್ನವರ್ಗದ ವಿದ್ಯಾರ್ಥಿನಿ. ಈ ಬಡಬಾಲಕಿ ಪುತ್ತೂರು ಸರಕಾರಿ ಕಿರಿಯ ಕಾಲೇಜಿನಲ್ಲಿ 10ನೇ ತರಗತಿಯಲ್ಲಿ ಓದುತ್ತಿದ್ದಳು. ಪುತ್ತೂರಿನಲ್ಲಿ ಹರಿಜನ-ಗಿರಿಜನ ವಿದ್ಯಾರ್ಥಿನಿಯರಿಗೆ ಮೀಸಲಾಗಿರುವ ಹಾಸ್ಟಲ್‌ನಲ್ಲಿ ವಾಸಮಾಡುತ್ತಿದ್ದಳು.

6-3-81ರಂದು ವಿದ್ಯಾರ್ಥಿನಿ ನಿಲಯದ ಸಮೀಪದ ಭಾವಿಯಲ್ಲಿ ಸೀತಾಳ ಶವ ತೇಲುತ್ತಿತ್ತು. ವಿಷಯ ಹರಡಿದ ನಂತರ ಹಾಸ್ಟೆಲ್ ವಾರ್ಡನ್, ಪೋಲೀಸರು ಪ್ರತ್ಯಕ್ಷರಾಗಿ ಶವವನ್ನು ಮೇಲೆತ್ತಿದರು. ಅವಸರದಲ್ಲಿ ಎಲ್ಲವನ್ನೂ ಮುಗಿಸಿ ಇದೊಂದು ಆತ್ಮಹತ್ಯೆ ಎಂಬ ದಿಢೀರ್ ತೀರ್ಪಿತ್ತು ಶವವನ್ನು ತಕ್ಷಣ ಸುಟ್ಟು ಹಾಕಲು ಸೀತಾಳ ತಂದೆ ಶ್ರೀ ರಾಮನಾಯ್ಕರನ್ನು ಒತ್ತಾಯಿಸಿ ವಿಷಯಕ್ಕೆ ಪೂರ್ಣ ವಿರಾಮ ಹಾಕಲು ಯತ್ನಿಸಿದರು.

ಎರಡು ದಿನಗಳ ನಂತರ ಎಸ್. ಎಫ್.ಐ. ಜಿಲ್ಲಾ ಸಮಿತಿಯ ಸಭೆಯಲ್ಲಿ ಸೀತಾಳ ಸಂಶಯಾತ್ಮಕ ಸಾವಿನ ಪ್ರಸ್ತಾಪ ಬಂದಿತು. ಜಿಲ್ಲಾ ಸಮಿತಿ ಅಧ್ಯಕ್ಷ ಕಾಂ. ರಾಮಾನುಜಂ, ಕಾರ್ಯದರ್ಶಿ ಕಾಂ. ಉಮೇಶ್ ಭಂಡಾರಿ, ಕಾಂ ಎಮ್. ಜಗನ್ನಾಥರೈ ಹಾಗೂ ಪುತ್ತೂರಿನ ಕಾಂ. ಕೆ. ಆಶಾ ಅವರನ್ನೊಳಗೊಂಡ ನಿಯೋಗವನ್ನು ಪುತ್ತೂರಿಗೆ ಕಳಿಸಲಾಯಿತು.

ನಿಯೋಗ ಅದೇ ದಿನ ಪುತ್ತೂರಿಗೆ ತೆರಳಿ ಮಾಹಿತಿ ಸಂಗ್ರಹಿಸಿತು. ಸೀತಾ ಕಲಿಯುತ್ತಿದ್ದ ಜ್ಯೂನಿಯರ್ ಕಾಲೇಜಿನ ವಿದಾರ್ಥಿ ನಾಯಕ ಶ್ರೀ ರಘುನಾಥ ಹೆಗ್ಡೆ, ಸೀತಾಳ ಸಹಪಾಠಿಗಳು, ಪುತ್ತೂರಿನ ಸಬ್‌ಇನ್‌ಸ್ಪೆಕ್ಟರ ಮತ್ತು ಹಾಸ್ಟೆಲಿನ ವಾರ್ಡನ್ ಮುಂತಾದವರನ್ನು ಭೇಟಿ ಮಾಡಿದಾಗ ಸಾವಿನ

(7ನೇ ಪುಟ ನೋಡಿ)

ಐವತ್ತು ವರ್ಷಗಳಾಚೆ ನಿಂತ ಭಗತ್‌ಸಿಂಗ್ ನೆನಪು

ಭಗತ್ ಸಿಂಗ್! ರಾಜಗುರು! ಸುಖದೇವ್! ಭಾರತದ ವಿಮೋಚನಾ ಹೋರಾಟದ ಬಿಸಿಯುಸಿರಾಗಿದ್ದ ಕ್ರಾಂತಿವೀರರು! ಸ್ವಾತಂತ್ರ್ಯ ಹೋರಾಟಗಾರರಿಗೆ ಸ್ಫೂರ್ತಿ ಸೆಲೆಯಾಗಿದ್ದ, ಆವೇಶ ಉಕ್ಕಿಸುವ ಅಗ್ನಿ ಪರ್ವತವಾಗಿದ್ದ ವಿಪ್ಲವ ಮೂರ್ತಿಗಳು ಬ್ರಿಟಿಷ್ ಏಕಾಧಿಪತ್ಯದ ನರರಾಕ್ಷಸರ ದಂಡನೆಯಂತೆ ಕುತ್ತಿಗೆಗೆ ನೇಣು ಬಿಗಿದುಕೊಂಡು, ಪ್ರಾಣಹೋಗುವವರೆಗೆ ತೂಗಾಡಬೇಕೆಂಬ ಆಜ್ಞೆಯ ಪ್ರಕಾರ ನೇಣುಗಂಬ ಏರಿ ಸಾವಿನತ್ತ ಸಾಗಿದ ವೀರತ್ಯಾಗಿಗಳು ಇವರು.

೫೦ ವರುಷಗಳು

1931, ಮಾರ್ಚ್ 23ರ ನಡುರಾತ್ರಿ! ಭಾರತ ಜನತೆಯ ಪ್ರೀತಿಪಾತ್ರರು ಗಲ್ಲಿಗೇರಿ ಪ್ರಾಣಾರ್ಪಣೆ ಮಾಡಿದ ದಿನ ಇಡೀ ದೇಶ ಶೋಕ ಸಾಗರದಲ್ಲಿ ತೇಲಿತ್ತು.

1981, ಮಾರ್ಚ್ 23 - ಐವತ್ತು ವರುಷಗಳ ನಂತರ ಭಗತ್‌ಸಿಂಗನ ನೆನಪು. ಭಾರತವನ್ನು ದಾಸ್ಯದಿಂದ ವಿಮೋಚನೆಗೊಳಿಸಬೇಕೆಂದು ತಮ್ಮನ್ನೇ ಆತ್ಮಾರ್ಪಣೆ ಮಾಡಿಕೊಂಡ ತ್ಯಾಗಿಗಳಿಗೆ ಸುವರ್ಣ ಮಹೋತ್ಸವದ ಕೆಂಪುದಿನ ಇದು.

ಅವರು ಮಾಡಿದ ತಪ್ಪಾದರೂ ಏನು? ತಮ್ಮ ನಾಡನ್ನು ಪ್ರೀತಿಸಿದ್ದೇ ಅವರು ಎಸಗಿದ ಮಹಾತಪ್ಪು. ಅವರು ಭಾರತಕ್ಕೆ ಹೆಮ್ಮೆ ತಂದರು.

ಪಂಜಾಬಿನ ಸಟ್ಲೆಜ್‌ನ ದಡದಲ್ಲಿ ಭಗತ್‌ಸಿಂಗ್‌ನ ದೇಹ ಉರಿದು ಬೂದಿಯಾಯಿತು.

1921ರಲ್ಲಿ ಗಾಂಧೀಜಿಯ ನಾಯಕತ್ವದಲ್ಲಿ ನಡೆದ ಅಸಹಕಾರ ಚಳುವಳಿಯನ್ನು ನಿಲ್ಲಿಸಲಾಯಿತು. ಅದರ ನಂತರ ಹೋರಾಟ ಯಾವ ಮಾರ್ಗದಲ್ಲಿ ನಡೆಯಬೇಕೆಂದು ತಿಳಿಯದೆ ದೇಶ ಕುಸಿದು ಕುಳಿತಿತು. ಇಂಥ ಪರಿಸ್ಥಿತಿಯಲ್ಲಿ ಯುವ ಹೋರಾಟಗಾರರು ದಿಕ್ಕು ತೋಚದೆ ಕಂಗಾಲಾದರು. ಯುವಕರ ಒಂದು ವಿಭಾಗ ತೀವ್ರವಾದಿ ಚಳುವಳಿಯಿಂದ ಆಕರ್ಷಿತಗೊಂಡಿತು.


ಸಮಾಜವಾದೀ ಸಾಹಿತ್ಯ

ಇಂತಹ ಒಂದು ಸಂದಿಗ್ಧ ಸ್ಥಿತಿಯಲ್ಲೇ ಸಮಾಜವಾದೀ ಸಾಹಿತ್ಯಗಳು ಗುಪ್ತವಾಗಿ ಭಾರತಕ್ಕೆ ಬರಲಾರಂಭಿಸಿತು. "ಲೆನಿನ್ ಜೀವನ", "ನವೆಂಬರ್ ಕ್ರಾಂತಿ" ಮುಂತಾದುವುಗಳಿಗೆ ಸಂಬಂಧಿಸಿದ ಕೃತಿಗಳು ಸಾಮ್ರಾಜ್ಯಶಾಹಿಗಳನ್ನೆದುರಿಸಿ ಹೋರಾಡುವುದಕ್ಕೆ ತುರ್ಕಿ, ಚೀನಾ ಮುಂತಾದ ದೇಶಗಳಿಗೆ ಸೋವಿಯತ್ ನೀಡಿದ ನೆರವು ತರುಣರನ್ನು ಆಕರ್ಷಿಸಿ ಸಮಾಜವಾದೀ ಪ್ರಜ್ಞೆಯ ವೀರರನ್ನಾಗಿ ಅವರನ್ನು ಪರಿವರ್ತಿಸಿತು.

ಇಂತಹ ಒಂದು ರಾಜಕೀಯ ಸನ್ನಿವೇಶದಲ್ಲೇ ನಾಡಿನ ಹಲವಾರು ಭಾಗಗಳಲ್ಲಿ ಉಗ್ರವಾದಿ ಚಳುವಳಿಯ ತಂಡಗಳು ರೂಪುಗೊಳ್ಳತೊಡಗಿತು. ಗುಲಾಮ ವ್ಯವಸ್ಥೆಯನ್ನು ಸುಖದ ಸುಪ್ಪತ್ತಿಗೆಯೆಂದು ಭಾವಿಸಿ ದೀರ್ಘ ನಿದ್ರೆಯಲ್ಲಿ ಗೊರಕೆ ಹೊಡೆಯುತ್ತಿದ್ದ ದೇಶವನ್ನು ಶಾಕ್ ಟ್ರೀಟ್‌ಮೆಂಟ್ ಕೊಟ್ಟು ಸಿಡಿದೇಳುವಂತೆ ಮಾಡಬೇಕೆಂದು ಆ ದೇಶಭಕ್ತ ತರುಣರು ತೀರ್ಮಾನಿಸಿದರು. ಆಳುತ್ತಿರುವ ಪರಕೀಯರನ್ನು ಗುಂಡಿಟ್ಟುಕೊಲ್ಲುವುದೇ ದಾರಿ ಎಂದು ಭಾವಿಸಿದರು.

ಬಾಂಬುಗಳನ್ನು. ರಿವಾಲ್ವರ್‌ಗಳನ್ನು ಕೈಗೆತ್ತಿಕೊಳ್ಳುವುದರೊಂದಿಗೇ ಬ್ರಿಟಿಷ್ ಆಡಳಿತವನ್ನು ನಿರ್ನಾಮಗೊಳಿಸಿದ ನಂತರ ರೂಪುಗೊಳ್ಳಲಿರುವ ಸರಕಾರ ಎಂತಹುದಾಗಿರಬೇಕೆಂಬ ಬಗ್ಗೆಯೂ ಆ ವೀರರು ಆಲೋಚಿಸಿದ್ದರು. ಉಗ್ರ ಚಳುವಳಿಯ ಪ್ರತಿಯೊಬ್ಬ ತರುಣನ ತುಟಿಗಳಿಂದಲೂ ಇದರ ಕುರಿತಾದ ಪ್ರಶ್ನೆಗಳು ಹೊರಬೀಳುತ್ತಿದ್ದವು.

> ಹೋರಾಟದ ಏರುಪೇರುಗಳ ಪ್ರತಿಕೂಲ ವಾತಾವರಣದಲ್ಲಿ ಕೆಲವೊಮ್ಮೆ ಒಬ್ಬೊಬ್ಬರಾಗಿ ಪ್ರತಿಯೊಬ್ಬ ಸಂಗಾತಿಯೂ ಇಲ್ಲವಾಗುವ ಸಂದರ್ಭ ಬರುತ್ತದೆ. ಅಂತಹ ಸಮಯದಲ್ಲಿ ಮನುಷ್ಯ ಸ್ವಾಂತನದ ಎರಡು ಮಾತುಗಳಿಗಾಗಿ ಹಂಬಲಿಸುತ್ತಾನೆ. ಆ ಕ್ಷಣದಲ್ಲೂ ಯಾರು ವಿಚಲಿತನಾಗದೆ ತನ್ನ ಹಾದಿಯನ್ನು ತಪ್ಪುವುದಿಲ್ಲವೋ, ಕರ್ತವ್ಯದ ಹೊರೆಯಿಂದ ಯಾರ ಕಾಲುಗಳು ತೊಡರುವುದಿಲ್ಲವೋ,



> ಹೆಗಲು ಕುಗ್ಗುವುದಿಲ್ಲವೋ, ಯಾರು ಬೆಳಕಿನ ಜ್ಯೋತಿ ಮಂದವಾಗಬಾರದೆಂದು ಚಡಪಡಿಕೆಯಿಂದ ತನ್ನಲ್ಲಿ ತಾನು ಬೇಯುತ್ತಾನೋ, ಮೌನ ಹಾದಿಯಲ್ಲಿ ಕತ್ತಲು ಬೀಳಬಾರದೆಂದು ಉರಿಯುತ್ತಾನೋ. ಅಂತಹ ವ್ಯಕ್ತಿಗಳು ಮಾತ್ರ ನನ್ನ ಕನಸನ್ನು ನನಸನ್ನಾಗಿ ಮಾಡಬಲ್ಲರು.
>
> —ಭಗತ್‌ಸಿಂಗ್

ನೌಜವಾನ್ ಭಾರತ್ ಸಭಾ

ಆಗ ಭಗತ್ ಸಿಂಗ್ ಇನ್ನೂ 20 ವರ್ಷ. ಉತ್ತರ ಭಾರತದಲ್ಲಿ ಎಡಪಂಥೀಯ ದೃಷ್ಟಿಕೋನದ ಉಗ್ರ ಚಳುವಳಿಯ ಕೇಂದ್ರವನ್ನು, ಭಗತ್ ಸಿಂಗ್ ಮತ್ತು ಅವರ ಸಂಗಾತಿಗಳು 'ನೌಜವಾನ್ ಭಾರತ್ ಸಭಾ' ಎಂಬ ಹೆಸರಿನಲ್ಲಿ ಸ್ಥಾಪಿಸಿದರು. ಈ ಸಂಸ್ಥೆ ಕುದಿಯುವ ರಕ್ತದ ದೇಶಭಕ್ತ ತರುಣರನ್ನು ಅಯಸ್ಕಾಂತದಂತೆ ಆಕರ್ಷಿಸಿತು. ನಾಡಿನಾದ್ಯಂತ ಈ ಸಂಸ್ಥೆಗೆ ಜನತೆಯ ಬೆಂಬಲ ಹೆಚ್ಚಿತು. ಇದರಲ್ಲಿ ಸೇರಿದ ತರುಣರು ತೀವ್ರವಾದಿಗಳಾಗಿ ಮಾರ್ಪಟ್ಟರು.

ಹಿಂದೂಸ್ತಾನ್ ಸೋಷಲಿಸ್ಟ್ ರಿಪಬ್ಲಿಕ್ ಸಂಘಟನೆ

ಅದೇ ಸಂದರ್ಭದಲ್ಲಿ, ಉತ್ತರದ ಜಿಲ್ಲೆಗಳಲ್ಲಿ ಚಂದ್ರಶೇಖರ ಆಜಾದ್ ನೇತೃತ್ವದಲ್ಲಿ ಹಿಂದೂಸ್ತಾನ್ ಸೋಷಲಿಸ್ಟ್ ರಿಪಬ್ಲಿಕ್ ಸಂಘಟನೆಯೆಂಬ ಒಂದು ಸಂಸ್ಥೆಯನ್ನು ಸ್ಥಾಪಿಸಲಾಗಿತ್ತು. ಭಾರತದಲ್ಲಿ ಒಂದು ಸಮಾಜವಾದೀ ಸರ್ಕಾರವನ್ನು ಸ್ಥಾಪಿಸುವುದೇ ಈ ಸಂಸ್ಥೆಯ ಗುರಿಯಾಗಿತ್ತು. ಉತ್ತರ ಜಿಲ್ಲೆಗಳ ಪ್ರಮುಖ ನಗರಗಳಲ್ಲೆಲ್ಲಾ ಈ ಸಂಘಟನೆಯ ಶಾಖೆಗಳನ್ನು ಸ್ಥಾಪಿಸಲಾಯಿತು.

ಸೈಮನ್ ಕಮಿಷನ್ ಹಿಂದಿರುಗು

ಈ ಶಾಖೆಗಳ ನಡುವೆ ಸಂಪರ್ಕ ಕಲ್ಪಿಸಿ, ಯೋಜನೆಗಳನ್ನು ರೂಪಿಸುವ ಜವಾಬ್ದಾರಿ ಭಗತ್‌ಸಿಂಗ್‌ದಾಯಿತು.

ಈ ಸಮಯದಲ್ಲಿ ಇಂಗ್ಲೆಂಡ್‌ನಿಂದ ಲಾರ್ಡ್ ಸೈಮನ್ ನಾಯಕತ್ವದ ಒಂದು ತಂಡ ಭಾರತಕ್ಕೆ ಬಂದಿತು. ಭಾರತದ ಜನಕ್ಕೆ ಆಡಳಿತ ನಡೆಸುವ ಸಾಮರ್ಥ್ಯವಿದೆಯೋ, ಅವರಿಗೆ ಯಾವ ರೀತಿಯ ಸುಧಾರಣೆಗಳನ್ನು ನೀಡಬಹುದೆಂದು ಶಿಫಾರಸು ಮಾಡಲು ಸೈಮನ್ ಕಮಿಷನ್ ಭಾರತಕ್ಕೆ ಬಂದಿತು.

ಸ್ವಾತಂತ್ರ್ಯವೆಂಬುದು ಆಜನ್ಮ ಹಕ್ಕು, ಅದನ್ನು ವಿಚಾರಣೆಗೊಳಪಡಿಸಲು ಯಾರಿಗೂ ಹಕ್ಕಿಲ್ಲ, ಸೈಮನ್ ಕಮಿಷನ್ ಅನ್ನು ಬಹಿಷ್ಕರಿಸುತ್ತೇವೆ ಎಂದು ಭಾರತದ ಜನತೆ ತೀರ್ಮಾನಿಸಿತು.

1928ರಲ್ಲಿ ಸೈಮನ್ ಕಮಿಷನ್ ಭಾರತಕ್ಕೆ ಬಂದಿತು. ಪ್ರಮುಖ ನಗರಗಳಿಗೆ ಭೇಟಿ ನೀಡಿತು. ಇಡೀ ದೇಶ ರೊಚ್ಚಿಗೆದ್ದು ಭೇಟಿ ನೀಡುವಲ್ಲೆಲ್ಲಾ ಕಪ್ಪು ಬಾವುಟ ಪ್ರದರ್ಶಿಸಿ 'ಸೈಮನ್ ಹಿಂತಿರುಗು' ಎಂದು ಗರ್ಜಿಸಿತು.

1921ರ ಅಸಹಕಾರ ಚಳುವಳಿಯ ನಂತರದ ಉತ್ಸಾಹಪೂರ್ಣ ಚಳವಳಿ ಇದಾಗಿತ್ತು.

1928ರ ಅಕ್ಟೋಬರ್ 30ರಂದು ಸೈಮನ್ ಕಮಿಷನ್ ಲಾಹೋರಿಗೆ ಬಂದಿತು. ರಾಷ್ಟ್ರನಾಯಕ ಲಾಲಾ ಲಜಪತ್‌ರಾಯ್ ನೇತೃತ್ವದಲ್ಲಿ ಒಂದು ಬೃಹತ್ ಕಪ್ಪುಬಾವುಟ ಪ್ರದರ್ಶನ ನಡೆಸಿ 'ಸೈಮನ್ ಹಿಂತಿರುಗು' ಎಂಬ ಗುಡುಗಿನ ಅಲೆಯೆಬ್ಬಿಸಿತು.

ಸೀನಿಯರ್ ಪೋಲೀಸ್ ಸೂಪರಿಂಟೆಂಡೆಂಟ್ ಸ್ಕಾಟ್‌ನ ನಾಯಕತ್ವದಲ್ಲಿ ಲಾಲಾಜಿಯವರ ಪ್ರದರ್ಶನವನ್ನು ಸುತ್ತುವರಿದು ಲಾಠೀ ಪ್ರಹಾರ ನಡೆಸಲಾಯಿತು. ಲಾಲಾಜಿಯವರ ಎದೆಗೆ ತೀವ್ರವಾದ ಪೆಟ್ಟು ಬಿದ್ದು ಆಸ್ಪತ್ರೆಗೆ ಕೊಂಡೊಯ್ಯಲಾಯಿತು. ಆದರೂ ಸಹ ಚೇತರಿಸಿಕೊಳ್ಳಲಾಗದೆ 1928ರ ನವೆಂಬರ್ 17ರಂದು ಲಾಲಾಜಿ ಸಾವನ್ನಪ್ಪಿದರು.

ಸಾಯುವ ಮುನ್ನ ಅವರಾಡಿದ ನುಡಿ "ನನ್ನ ಮೇಲೆ ಬಿದ್ದ ಒಂದೊಂದು ಪೆಟ್ಟೂ ಸಾಮ್ರಾಜ್ಯಶಾಹಿಗಳ ಶವ ಪೆಟ್ಟಿಗೆಗೆ ಹೊಡೆದ ಮೊಳೆಗಳು" ಎಂದು. ಲಾಲಾಜಿಯವರ ಸಾವಿಗೆ ಪ್ರತೀಕಾರ ತೀರಿಸಿಕೊಳ್ಳಲು ತರುಣರ ಗುಂಪು ಚಡಪಡಿಸಿತು. ಭಗತ್‌ಸಿಂಗ್ ಮತ್ತವರ ಸಂಗಡಿಗರು ಕಾರ್ಯಾಚರಣೆಗೆ ತೊಡಗಿದರು.

ಯೋಜನೆಗಳನ್ನು ಸಿದ್ಧಪಡಿಸಲಾಯಿತು. 1928ರ ಡಿಸೆಂಬರ್ 17 ರಂದು ಯೋಜನೆ ಕಾರ್ಯಗತವಾಯಿತು. ಪೋಲೀಸ್ ಕಚೇರಿಯಿಂದ ಸಹಾಯಕ ಸೂಪರಿಂಟೆಂಡೆಂಟ್ ಸ್ಯಾಂಡರ್ಸ್ ಹೊರಟಾಗ ಅವನನ್ನು ಸ್ಕಾಟ್ ಎಂದು ತಪ್ಪಾಗಿ ಭಾವಿಸಿ ರಾಜಗುರು ಗುಂಡು ಹಾರಿಸಿದರು. ಸ್ಯಾಂಡರ್ಸ್ ಸತ್ತು ಬಿದ್ದ.

ಮರುದಿನ ಲಾಹೋರ್‌ನಾದ್ಯಂತ 'ಲಾಲಾಜಿಯ ಸಾವಿಗೆ ಸೇಡು ತೀರಿಸಿಕೊಂಡೆವು' ಎಂಬ ಕರಪತ್ರಗಳು ಹಾರಾಡಿದವು.

ದುರದೃಷ್ಟವಶಾತ್, 1929ರ ಸೆಪ್ಟೆಂಬರ್ 30 ರಂದು ಪೂನಾದಲ್ಲಿ ರಾಜಗುರು, 1929ರ ಏಪ್ರಿಲ್ 15 ರಂದು ಸುಖದೇವ್ ಪೋಲೀಸರ ಸೆರೆಯಾದರು.

ಭಗತ್ ಸಿಂಗ್ ಪೋಲೀಸರಿಂದ ತಪ್ಪಿಸಿಕೊಂಡು ಚಂದ್ರಶೇಖರ ಆಜಾದ್‌ರೊಡನೆ ಕಲ್ಕತ್ತಾಗೆ ಹೋದರು.

ಪಾರ್ಲಿಮೆಂಟಿನಲ್ಲಿ

ದೆಹಲಿಯ ವಿಧಾನಸಭೆಯಲ್ಲಿ (ಇಂದಿನ ಪಾರ್ಲಿಮೆಂಟ್) ವೈಸರಾಯ್ ಕೌನ್ಸಿಲ್‌ನ ಆಂತರಿಕ ವ್ಯವಹಾರಗಳ ಸಚಿವ ಹೆನ್ರಿಗ್ರೇಗ್ 1929ರ ಏಪ್ರಿಲ್‌ನಲ್ಲಿ ಕಾರ್ಮಿಕರ ಹಕ್ಕುಗಳನ್ನು ಕಸಿಯುವಾಗ ಬಂದೂಬಸ್ತು ಮಸೂದೆಯನ್ನು, ಕ್ರಾಂತಿಕಾರಿಗಳೊಡನೆ ಸಂಪರ್ಕವಿರುವ ಸಂದೇಹ ಬಂದರೆ ಅವರುಗಳ ಆಸ್ತಿಯನ್ನು ಜಪ್ತಿ ಮಾಡಲು ಅಧಿಕಾರ ನೀಡುವ ಮಸೂದೆಯನ್ನು ಜಾರಿಗೆ ತಂದನು.

ವಿಧಾನಸಭೆಯ ಸಭಾಧ್ಯಕ್ಷರಾದ ವಿಠಲ್‌ಬಾಯಿ ಪಟೇಲ್ ಮಸೂದೆಗೆ ಅನುಮತಿ ನಿರಾಕರಿಸಿದರು. ವಿವಾದ ಬಿಸಿಯೇರತೊಡಗಿದಾಗ ಪ್ರೇಕ್ಷಕರ ಗ್ಯಾಲರಿಯಲ್ಲಿದ್ದ ಭಗತ್ ಸಿಂಗ್ ಹಾಗೂ ಬಿ. ಕೆ. ದತ್ ಅವರು ಬಾಂಬನ್ನು ಸಭೆಯ ಮೇಲೆ ಎಸೆದರು. ನೆಲಕ್ಕೆ ಬಿದ್ದ ಬಾಂಬುಗಳು ಸ್ಫೋಟಿಸಿದಾಗ ಗ್ಯಾಲರಿಯಲ್ಲಿದ್ದ ಭಗತ್ ಸಿಂಗ್ ಮತ್ತು ದತ್ ಅವರು 'ಇನ್‌ಕ್ವಿಲಾಬ್ ಜಿಂದಾಬಾದ್'! ಸಾಮ್ರಾಜ್ಯಶಾಹಿ ನಿರ್ನಾಮವಾಗಲಿ! ಎಂದು ಘೋಷಣೆ ಕೂಗಿದರು. ತಪ್ಪಿಸಿಕೊಳ್ಳುವ ಏರ್ಪಾಟಾಗಿದ್ದರೂ ಸಹ ಅವರು ತಪ್ಪಿಸಿಕೊಳ್ಳಲಿಚ್ಛಿಸದೆ ದಸ್ತಗಿರಿಯಾದರು.

1929ರ ಜುಲೈ 12 ರಂದು ಬಾಂಬ್ ಎಸೆದಿದ್ದಕ್ಕಾಗಿ ಇಬ್ಬರಿಗೂ 'ಅಜೀವ ಶಿಕ್ಷೆ' (21 ವರುಷ) ವಿಧಿಸಲಾಯಿತು. ಈ ಪ್ರಕರಣವನ್ನು 'ಲಾಹೋರ್ ಸಂಚಿನ ಪ್ರಕರಣ'ವೆಂದು ಕರೆದರು.

ಕೊನೆಯುಸಿರಿನವರೆಗೂ ಲೆನಿನ್ ಹೆಸರನ್ನು ಉಚ್ಛರಿಸಿದರು

1930, ಜನವರಿ 21ರಂದು ಲೆನಿನ್ ಸ್ಮರಣದಿನದಂದು ಭಗತ್‌ಸಿಂಗ್ ಮತ್ತವನ ಸಂಗಡಿಗರು ಕೆಂಪುವಸ್ತ್ರ ಧರಿಸಿ ನ್ಯಾಯಾಲಯವನ್ನು ಪ್ರವೇಶಿಸಿದರು. ಅವರನ್ನು ಕಟಕಟೆಯಲ್ಲಿ ನಿಲ್ಲಿಸಿದ ಒಡನೆ ಮಹಾಕವಿ ರಾಮ್ ಪ್ರಸಾದ್ ಬಿಸ್ಮಿಲ್ಲಾರವರ ಆವೇಶಪೂರ್ಣ ಗೀತೆಯೊಂದನ್ನು ಹಾಡಿದರು.

ಗೀತೆಯನ್ನು ಹಾಡಿ ಮುಗಿಸಿದ ನಂತರ

ಸಮಾಜವಾದೀ ಕ್ರಾಂತಿ ಚಿರಾಯುವಾಗಲಿ!

ಕಮ್ಯುನಿಸ್ಟ್ ಇಂಟರ್‌ನ್ಯಾಶನಲ್ ಚಿರಾಯುವಾಗಲಿ!

ಲೆನಿನ್ ಹೆಸರು ಚಿರಾಯುವಾಗಲಿ!

ದುಡಿಯುವ ಜನರ ಚಳುವಳಿ ಚಿರಾಯುವಾಗಲಿ!

ಸಾಮ್ರಾಜ್ಯವಾದ ನಾಶವಾಗಲಿ!

ಎಂದು ಘೋಷಿಸಿದರು.

(7ನೇ ಪುಟ ನೋಡಿ)

ಸಂಕ್ಷಿಪ್ತ ಸಮಾಚಾರಗಳು

ಶಿವಮೊಗ್ಗ

ಕಳೆದ ಅನೇಕ ವರ್ಷಗಳಿಂದ ಹೊಳಲೂರಿನಲ್ಲಿ ಬಡವರನ್ನು ಅಪಾರವಾಗಿ ಶೋಷಿಸಿ ಹಣ ಕೀಳುವ ವೈದ್ಯರೋರ್ವರ ವಿರುದ್ಧ ಡಿ. ವೈ. ಓ. ತರುಣರು 9-3-81ರಂದು ಗ್ರಾಮಸ್ಥರೊಡಗೂಡಿ ಜಿಲ್ಲಾಧಿಕಾರಿಯವರಿಗೆ ಮನವಿ ಸಲ್ಲಿಸಿ ಹೊಳಲೂರಿನ ವೈದ್ಯ ಮಹಮ್ಮದ್ ಸಾದಿಕ್‌ರನ್ನು ತಕ್ಷಣ ವರ್ಗಾವಣೆ ಮಾಡಬೇಕೆಂದು ಒತ್ತಾಯಿಸಿ ಜಿಲ್ಲಾಧಿಕಾರಿಯವರ ಆಫೀಸಿನ ಮುಂದೆ ಧರಣಿ ಸತ್ಯಾಗ್ರಹ ಆಚರಿಸಿದರು.

ವಿರಾಜಪೇಟೆ

ಕೊಡಗು ಜಿಲ್ಲೆಯ ಪ್ಲಾಂಟೇಷನ್ ಕಾರ್ಮಿಕರು ಸಿ.ಐ.ಟಿ.ಯು. ಸಂಘಟನೆಗೆ ಹೆಚ್ಚು ಹೆಚ್ಚು ಸೇರುತ್ತಿದ್ದಾರೆ. ಇದನ್ನು ಸಹಿಸದ ತೋಟ ಮಾಲೀಕರು ಗೂಂಡಾಗಳಿಂದ ಸಿ. ಐ. ಟಿ. ಯು. ಕಾರ್ಯಕರ್ತರ ಮೇಲೆ ಹಲ್ಲೆ ಮಾಡಿಸುತ್ತಿದ್ದಾರೆ. 14-3-81ರಂದು ಕ್ಲೋಸ್‌ಬರ್ನ್ ಎಸ್ಟೇಟ್‌ನಲ್ಲಿ ಗೂಂಡಾಗಳು ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ ಕಾರ್ಯಕರ್ತರಾದ ಕಾಂ. ದಿವಾಕರ, ರಾಘವ ಇವರುಗಳ ಮೇಲೆ ಹಲ್ಲೆ ನಡೆಸಿದ್ದಾರೆ. ಪ್ಲಾಂಟರುಗಳಿಗೆ ಸಹಾಯಕವಾಗುವ ಹಾಗೆ ಕಾರ್ಮಿಕ ಇಲಾಖೆ ಮತ್ತು ಪೋಲೀಸು ವರ್ತಿಸುತ್ತಿದೆ. ಈ ದಾಳಿಗಳನ್ನು ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್‌ನ ಕಾರ್ಯದರ್ಶಿಯವರು ಉಗ್ರವಾಗಿ ಖಂಡಿಸಿದ್ದಾರೆ.

ಬಿಜಾಪುರ

23-3-81ರಂದು ಬಿಜಾಪುರದಲ್ಲಿ ಪ್ರಗತಿಪರ ಜನತಂತ್ರರಂಗದ ರೈತ–ಕೂಲಿಕಾರರ ಹೋರಾಟ ಸಮಿತಿಯ ವತಿಯಿಂದ ಮಾರ್ಚ್ 23ರಂದು ಒಂದು ಸಾವಿರಕ್ಕೂ ಹೆಚ್ಚು ರೈತರು ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ಸತ್ಯಾಗ್ರಹ ನಡೆಸಿದರು. ಕಾಂಗ್ರೆಸ್ (ಯು)ನ ವೈ. ಬಿ. ಪಾಯಂಣವರ, ಸಿ.ಪಿ.ಐ.(ಎಂ)ನ ಕಾಂ. ಎಸ್. ಕೆ. ಉಪಾಧ್ಯಾಯ, ರೈತ ಸಂಘದ ಕಾಂ. ಭೀಮಸಿ ಕಲಾದಗಿ ಮೊದಲಾದವರ ನೇತೃತ್ವದಲ್ಲಿ ಮನವಿ ಅರ್ಪಿಸಲಾಯಿತು. ಸಾಯಂಕಾಲ ಬಸವೇಶ್ವರ ಚೌಕದಲ್ಲಿ ಕಾಂ. ಭೀಮಸಿ ಕಲಾದಗಿಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆಯಿತು. ಕಾಂಗ್ರೆಸ್(ಯು)ನ ಬಿ. ಕೆ. ಚಂಚಲಕಲ, ವೈ. ಬಿ. ಪಾಯಣ್ಣವರ, ಕಮ್ಯುನಿಸ್ಟ್ ಪಾರ್ಟಿಯ ಕಾಂ. ಲಾಯದ ಗುಂದಿ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾಂ. ಎಸ್. ಕೆ. ಉಪಾಧ್ಯಾಯ ಮೊದಲಾದವರು ಮಾತನಾಡಿ ಸರಕಾರದ ಆರ್ಥಿಕ ನೀತಿಯನ್ನು, ಹೋರಾಟಗಳನ್ನು ಬಗ್ಗು ಬಡಿಯುವ ಜನ ವಿರೋಧಿ ನೀತಿಯನ್ನು ಉಗ್ರವಾಗಿ ಖಂಡಿಸಿದರು.

●

ಕುಂದಾಪುರ

10-3-81ರಂದು ಕುಂದಾಪುರದಲ್ಲಿ ಎಸ್.ಎಫ್.ಐ. ಮತ್ತು ಡಿ.ವೈ.ಓ.ಗಳು ಸಂಯುಕ್ತವಾಗಿ 'ಪವಾಡಗಳು ಮತ್ತು ದೇವಮಾನವರು' ಎಂಬ ವಿಷಯದಲ್ಲಿ ಚರ್ಚಾ ಕಾರ್ಯಕ್ರಮ ಏರ್ಪಡಿಸಿತ್ತು. ಮುಖ್ಯಭಾಷಣಕಾರರಾಗಿ ಭಾರತ ವಿಚಾರವಾದಿ ಸಂಘದ ಕಾರ್ಯದರ್ಶಿ ಶ್ರೀ ಬಿ. ಪ್ರೇಮಾನಂದ್ ಆಗಮಿಸಿದ್ದರು. ಶ್ರೀ ಪ್ರೇಮಾನಂದರು ಮಾತನಾಡುತ್ತಾ ಪವಾಡಗಳು ಮತ್ತು ದೇವಮಾನವರ ಟೊಳ್ಳುತನವನ್ನು ಬಯಲಿಗೆಳೆದರು. ಸಭೆಯಲ್ಲಿ ಉಪಸ್ಥಿತರಿದ್ದ ಕೋಟಾ ಲಕ್ಷ್ಮಣ ಕಾರಂತರು, ಗುಲ್ಬರ್ಗಾ, ಬೀದರ್ ಜಿಲ್ಲೆಗಳಲ್ಲಿ ಹಳ್ಳಿಗಾಡಿನ ಅಸಹಾಯಕ ಮುಗ್ಧ ಜನರನ್ನು ಪೀಡಿಸುತ್ತಿರುವ ಬಾನಾಮತಿಯ ವೈಖರಿಯನ್ನು ವಿವರಿಸಿದರು. ಅನೇಕ ಜನರು ಭಾಗವಹಿಸಿ ಚರ್ಚೆಯು ಫಲಪ್ರದವಾಯಿತು.

ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿನಿಯ ಸಂಶಯಾತ್ಮಕ ಸಾವು

[5ನೇ ಪುಟದಿಂದ]

ಬಗ್ಗೆ ಸಂಶಯ ಪ್ರಬಲವಾಗಿದೆ. ಪುತ್ತೂರಿನ ಸಬ್‌ಇನ್‌ಸ್ಪೆಕ್ಟರ ವಿಷಯವನ್ನು ಅಲ್ಲಿಗೇ ಮುಗಿಸಲು ಯತ್ನಿಸುತ್ತಿದ್ದುದು ಕಂಡುಬಂದಿತು. ಬಾವಿಯ ಅಕ್ಕಪಕ್ಕದ ನಿವಾಸಿಗಳನ್ನು ಭೇಟಿಮಾಡಲಾಗಿತ್ತು.

ಸೀತಾಳ ಸಹಪಾಠಿಗಳ ಪ್ರಕಾರ, "ಹಾಸ್ಟೆಲ್ ವಾರ್ಡನ್‌ರ ಸಮ್ಮುಖದಲ್ಲೇ ವ್ಯಭಿಚಾರ ನಡೆಯುತ್ತಿತ್ತು. ಹಾಸ್ಟೆಲ್ ಇನ್‌ಸ್ಪೆಕ್ಟರು ಕುಡಿದು ಮತ್ತರಾಗಿ ಹಾಸ್ಟೆಲ್ ಪ್ರವೇಶಿಸುತ್ತಿದ್ದರು".

ಹಾಸ್ಟೆಲಿನ ವಾರ್ಡನರನ್ನು ಚೆನ್ನಾಗಿ ತಿಳಿದಿರುವ ಜನರ ಅಭಿಪ್ರಾಯದ ಪ್ರಕಾರ ಸೀತಾ ಅತ್ಯಾಚಾರಕ್ಕೆ ಗುರಿಯಾಗಿದ್ದಾಳೆ. ಆತ್ಮಹತ್ಯೆಯಲ್ಲ ಇದೊಂದು ಕೊಲೆ! ಇದು ನಿಜವಿರಬಹುದೇ ?

ಮಾಹಿತಿಗಳನ್ನು ಸಂಗ್ರಹಿಸಿದ ಎಸ್.ಎಫ್.ಐ. ನಿಯೋಗ ಮಂಗಳೂರಿನಲ್ಲಿ ದ. ಕ. ಜಿಲ್ಲಾಧಿಕಾರಿ, ಜಿಲ್ಲಾ ಪೋಲೀಸ್ ಅಧಿಕಾರಿ ಮತ್ತು ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳನ್ನು ಭೇಟಿಯಾಗಿ ತನಿಖೆಗೆ ಒತ್ತಾಯಿಸಿತು. 9-3-81ರಂದು ಮಂಗಳೂರಿನಲ್ಲಿ ಎಸ್.ಎಫ್.ಐ. ನಾಯಕರು ಪತ್ರಿಕಾಗೋಷ್ಠಿಯನ್ನು ಕರೆದು ವಿಷಯವನ್ನು ಬಹಿರಂಗಪಡಿಸಿದರು.

"ಸೀತಾಳ ಸಾವಿನ ತನಿಖೆಯಾಗಬೇಕು", ಹಾಸ್ಟೆಲ್‌ನ ವಾರ್ಡನ್ ಶ್ರೀಮತಿ ಶಾಂಭವಿಯನ್ನು ಕೂಡಲೇ ಅಮಾನತುಗೊಳಿಸಿ, ಅವಳನ್ನು ತನಿಖೆಗೆ ಗುರಿಪಡಿಸಬೇಕು" ಮುಂತಾದ ಬೇಡಿಕೆಗಳನ್ನು ಮುಂದಿಟ್ಟು ಎಸ್.ಎಫ್.ಐ. ಒತ್ತಾಯಿಸಿದೆ. ಈ ಬಗ್ಗೆ 7-3-81ರಂದು ಪುತ್ತೂರಿನಲ್ಲಿ ವಿದ್ಯಾರ್ಥಿಗಳ. ಸಾರ್ವಜನಿಕರ ಬಹಿರಂಗ ಸಭೆ ನಡೆದಿದೆ. ತೀವ್ರ ಕ್ರಮ ಕೈಗೊಳ್ಳದಿದ್ದರೆ ಜಿಲ್ಲೆಯಾದ್ಯಂತ ಚಳುವಳಿ ಆರಂಭಿಸುವುದಾಗಿ ಎಸ್.ಎಫ್.ಐ. ನಾಯಕರು ಎಚ್ಚರಿಸಿದ್ದಾರೆ.

ಪುತ್ತೂರಿಗೆ ಭೇಟಿನೀಡಿದ ಎಸ್.ಎಫ್.ಐ. ನಿಯೋಗದೊಟ್ಟಿಗೆ ದಲಿತ ಸಂಘರ್ಷ ಸಮಿತಿಯ ನಾಯಕ ಕಾಂ. ಬಿ. ರಾಮಕೃಷ್ಣರೂ ಜೊತೆಗಿದ್ದರು.

○

ಕಾರ್ಯಕಾರಿ ಸಮಿತಿಯ ವಿಸ್ತೃತ ಸಭೆ

ಕರ್ನಾಟಕ ಪ್ರೊವಿನ್ಶಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ನಿನ ಕಾರ್ಯಕಾರಿ ಸಮಿತಿಯ ವಿಸ್ತೃತ ಸಭೆಯು ತಾ.23-3-1981ರಂದು ಚಿಕ್ಕಮಗಳೂರಿನಲ್ಲಿ ಸಂಘದ ಉಪಾಧ್ಯಕ್ಷರಾದ ಕಾಂ. ಎ. ಸಿ. ಕೇಶವರ ಅಧ್ಯಕ್ಷತೆಯಲ್ಲಿ ನಡೆಯಿತು.

ನಗರದ ಮಾಜಿ ಪುರಸಭಾಧ್ಯಕ್ಷ ಸ್ವಾತಂತ್ರ್ಯಯೋಧ ಶ್ರೀ ಸಿ.ವಿ.ಧ್ರುವರ ನಿಧನದ ಬಗ್ಗೆ ಸಂತಾಪ ಸೂಚಿಸುವ ನಿರ್ಣಯವನ್ನು ಅಂಗೀಕರಿಸಲು ಸಭಿಕರು ಎದ್ದುನಿಂತು ಒಂದು ನಿಮಿಷ ಮೌನವನ್ನು ಆಚರಿಸಿದರು

ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪನವರು ಕಳೆದ ಸಭೆಯ ನಂತರ ಈವರೆಗಿನ ಬೆಳವಣಿಗೆಗಳ ಬಗ್ಗೆ ವರದಿ ಕೊಡುತ್ತಾ 23-2-81ರಂದು ಬೆಂಗಳೂರಿನಲ್ಲಿ ಕಾರ್ಮಿಕ ಸಚಿವರ ಸಮ್ಮುಖದಲ್ಲಿ ನಡೆದ ಸಭೆ. ಮಾರ್ಚ್ 5 ರಿಂದ 8ರವರೆಗೆ ಹರಿಹರದಲ್ಲಿ ನಡೆದ ಸಿ.ಐ.ಟಿ.ಯು ರಾಜ್ಯ ಸಮ್ಮೇಳನ, ಮೊದಲಾದ ವಿಷಯಗಳನ್ನು ವಿವರಿಸಿ ವರದಿಯ ಮೇಲೆ ನಡೆದ ಚರ್ಚೆಯಲ್ಲಿ ಮಯಿಂದ ಮೇಸ್ತ್ರಿ, ಶೀನ, ವೇಲಾಯುಧ, ಅಪ್ಪು, ಲಕ್ಷ್ಮಣ, ಟಿ.ರಾಮು, ಮಾರಿಮುತ್ತು, ಎಸ್. ಅಣ್ಣು, ತಮ್ಮ ನಾಯಕ ಮೇಸ್ತ್ರಿ ಭಾಗವಹಿಸಿದ್ದರು. ವರದಿಯು ಸರ್ವಾನುಮತದಿಂದ ಅಂಗೀಕಾರವಾಯಿತು.

ಸಭೆಯು ಮೂಡಿಗೆರೆ ತಾಲ್ಲೂಕು ಗೋಣಿಬೀಡು ಹೋಬಳಿಯಲ್ಲಿರುವ ರೋಸ್‌ಡೇಲ್ ಎಸ್ಟೇಟಿನ ಕಾರ್ಮಿಕರ ಮೇಲೆ ನಡೆದ ಮಾಲೀಕರ ಮತ್ತು ಜಿಲ್ಲಾ ಮೀಸಲು ಪೋಲೀಸ್ ದಬ್ಬಾಳಿಕೆಯನ್ನು ಖಂಡಿಸುವ ನಿರ್ಣಯವನ್ನು ಅಂಗೀಕರಿಸಿತು.

ಸಭೆಯು ಅಂಗೀಕರಿಸಿದ ಇನ್ನೊಂದು ನಿರ್ಣಯದಲ್ಲಿ ಬೆಂಗಳೂರಿನಲ್ಲಿ ಮೈಕೋ ಎಂಪ್ಲಾಯೀಸ್ ಅಸೋಸಿಯೇಷನ್ನಿನ ಕಛೇರಿಯನ್ನು ಕಾಂಗ್ರೆಸ್(ಐ) ಹೆಸರಿನ ಗೂಂಡಾಗಳು ಆಕ್ರಮಿಸಿರುವುದನ್ನು ಖಂಡಿಸಿತು.

ದನದ ದೊಡ್ಡಿಯಂತಿರುವ ಹಾಸ್ಟೆಲ್

ವಿರಾಜ್‌ಪೇಟೆಯ ಗಾಂಧೀ ನಗರದಲ್ಲಿರುವ ದಲಿತ ವಿದ್ಯಾರ್ಥಿಗಳು ಅಧಿಕ ಸಂಖ್ಯೆಯಲ್ಲಿರುವ ಸರಕಾರಿ ಸಾರ್ವಜನಿಕ ವಿದ್ಯಾರ್ಥಿ ನಿಲಯದ ಪರಿಸ್ಥಿತಿ ತುಂಬ ಶೋಚನೀಯವಾಗಿದೆ. ಈ ಹಾಸ್ಟೆಲ್ ತೀರ ಅವ್ಯವಸ್ಥೆಯಿಂದ ಕೂಡಿದ್ದು, ಕುಸಿದು ಬೀಳುವ ಅಪಾಯಕಾರಿ ಪರಿಸ್ಥಿತಿಯಲ್ಲಿದೆ. ಆಹಾರ ಪೂರೈಕೆ ಸರಿಯಾಗಿ ಆಗದೆ ಕೆಲವೊಮ್ಮೆ ವಿದ್ಯಾರ್ಥಿಗಳು ಉಪವಾಸ ಬೀಳಬೇಕಾದ ಪರಿಸ್ಥಿತಿ. ಹತ್ತು ವರುಷಗಳ ಹಿಂದೆ ನೀಡಲಾಗುತ್ತಿದ್ದ 75 ರೂ. ಮಾಸಿಕ ವೇತನದಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಹಾಸ್ಟೆಲ್‌ನ ದುಃಸ್ಥಿತಿಯನ್ನು ಮತ್ತು ಸರಕಾರದ ಬೇಜವಾಬ್ದಾರಿತನದ ಆಡಳಿತ ವೈಖರಿಯನ್ನು ಎಸ್.ಎಫ್.ಐ. ಖಂಡಿಸಿದೆ.

ಎಸ್. ಎಫ್. ಐ. ರಾಜ್ಯ ಅಧ್ಯಕ್ಷ ಕಾಂ. ಜಯಕುಮಾರ್‌ರವರು, ಪತ್ರಿಕಾ ಹೇಳಿಕೆಯ ಮೂಲಕ ಹಾಸ್ಟೆಲನ್ನು ಶೋಚನೀಯ ಸ್ಥಿತಿಯಲ್ಲಿ ನಡೆಸಿಕೊಂಡು ಬರುತ್ತಿರುವ ಸರಕಾರದ ಆಡಳಿತ ನೀತಿಯನ್ನು ತೀವ್ರವಾಗಿ ಖಂಡಿಸಿದ್ದಾರೆ.

●

ಜೀವವಿಮಾ ನಿಗಮದ ನೌಕರರಿಂದ ಅನಿರ್ಧಿಷ್ಟಾವಧಿ ಮುಷ್ಕರ

ಜೀವ ವಿಮಾ ನಿಗಮದ ಮೂರು ಮತ್ತು ನಾಲ್ಕನೇ ದರ್ಜೆಯ ಎಲ್ಲ ನೌಕರರೂ ತಮ್ಮ ಸಂಘಟನೆಗಳು ನೀಡಿದ ಜಂಟಿ-ಕರೆಯ ಮೇರೆಗೆ ಏಪ್ರಿಲ್ 2, 1981 ರಿಂದ ಅನಿರ್ಧಿಷ್ಟಾವಧಿ ಮುಷ್ಕರ ಹೂಡಲಿದ್ದಾರೆ.

ಜೀವವಿಮಾ ನೌಕರರ ಪ್ರಸ್ತುತ ಹೋರಾಟ, ಹಿಂದಿನ ಒಪ್ಪಂದದಂತೆ ತಮಗೆ ಸಲ್ಲಬೇಕಾಗಿದ್ದ ಸವಲತ್ತುಗಳನ್ನು ಏಕಪಕ್ಷೀಯವಾಗಿ ಬದಲಾಯಿಸುವವರ ವಿರುದ್ಧ, ನ್ಯಾಯಾಲಯದ ತೀರ್ಪನ್ನು ನಿಷ್ಕ್ರಿಯಗೊಳಿಸುವ ಸರಕಾರದ ಕ್ರಮದ ವಿರುದ್ಧ, ಸಂಘಟಿತ ಕಾರ್ಮಿಕರ ಒಂದು ವಿಭಾಗದ ಸಾಮೂಹಿಕ ಚೌಕಾಶಿಯ ಹಾಗೂ ಸಂಘಟನೆಯ ಹಕ್ಕುಗಳನ್ನು ಕಿತ್ತೊಗೆಯುವವರ ವಿರುದ್ಧ ಈ ಹೋರಾಟ ಪ್ರಾರಂಭವಾಗಲಿದೆ. ಈ ಜಂಟೀ ಹೋರಾಟಕ್ಕೆ 'ಸಾರ್ವಜನಿಕರು,ಇತರ ವಿಭಾಗದ ಕಾರ್ಮಿಕರು ಬೆಂಬಲ ನೀಡುವದು ತುಂಬ ಅವಶ್ಯವಿದೆ.

ಭಗತ್‌ಸಿಂಗ್ ನೆನಪು

(6ನೇ ಪುಟದಿಂದ)

ನಂತರ ಆಗ ತಾನೇ ನಡೆಯುತ್ತಿದ್ದ ಮೂರನೇ ಕಮ್ಯುನಿಸ್ಟ್ ಇಂಟರ್‌ನ್ಯಾಶನಲ್‌ಗೆ ಭಗತ್‌ಸಿಂಗ್ ಮತ್ತವರ ಸಂಗಾತಿಗಳು ಕಳುಹಿಸಲಿರುವ ಶುಭಾಶಯ ತಂತಿಯನ್ನು ಓದಿ ಅದನ್ನು ಅಲ್ಲಿಗೆ ಕಳಿಸಲು ನ್ಯಾಯಾಲಯದ ಮುಂದಿಟ್ಟರು.

ಆ ತಂತಿಯಲ್ಲಿ ಹೀಗೆ ಬರೆಯಲಾಗಿತ್ತು. ಲೆನಿನ್ ದಿನೋತ್ಸವದಂದು ಲೆನಿನ್ ತತ್ವಗಳನ್ನು ಅಂಗೀಕರಿಸಿ ಅದಕ್ಕೋಸ್ಕರ ಶ್ರಮಿಸುತ್ತಿರುವ ಎಲ್ಲರಿಗೂ ನಮ್ಮ ಹೃದಯಪೂರ್ವಕ ಶುಭಾಶಯಗಳನ್ನು ತಿಳಿಸುತ್ತಿದ್ದೇವೆ. ರಷ್ಯಾದಲ್ಲಿ ಕೈಗೊಂಡಿರುವ ಮಹತ್ವದ ಶೋಧನೆ ಜಯಗಳಿಸಲೆಂದು ಮನಸಾರೆ ಆಶಿಸುತ್ತೇವೆ. ಎಲ್ಲ ದೇಶಗಳ ಕಾರ್ಮಿಕವರ್ಗದ ಧ್ವನಿಯೊಂದಿಗೆ ನಮ್ಮ ಧ್ವನಿಯೂ ಸೇರಿ ಮೊಳಗಲಿ.

ಶ್ರಮಜೀವಿ ವರ್ಗ ಗೆಲ್ಲುತ್ತದೆ!
ಬಂಡವಾಳಶಾಹೀ ಸೋಲುತ್ತದೆ!
ಸಾಮ್ರಾಜ್ಯವಾದ ಅಳಿಯುತ್ತದೆ.

ಎಂದು ಅವರು ಗಟ್ಟಿಯಾದ ಧ್ವನಿಯಲ್ಲಿ ಆ ತಂತಿಯನ್ನು ಓದಿದರು.

ತಮಿಳು ಮೂಲ : ಮಯಿಲಾಡುಭಾರತಿ

ಅನುವಾದ : ಉದಯ್

●

ಫ್ಯಾಸಿಸ್ಟ್ ಕ್ರಮಗಳನ್ನು ತಡೆಗಟ್ಟಲು ಸಿ.ಪಿ.ಐ.(ಎಂ) ಕರೆ

[ಒಂದನೇ ಪುಟದಿಂದ]

ದಾಂಡೇಲಿಯ ಮಾರ್ಕ್ಸಿಸ್ಟ್ ಮುನ್ಸಿಪಲ್ ಅಧ್ಯಕ್ಷ ಆರ್. ಜಿ. ಸ್ಥಳೀಕರ ಮೇಲೆ ನಡೆದ ಧಾಳಿ ಮತ್ತು ಪುರಸಭೆಯ ಅಧ್ಯಕ್ಷಸ್ಥಾನದಿಂದ ಅವರು ಕೆಳಗಿಳಿಯುವಂತೆ ಬಲಾತ್ಕಾರ ನಡೆಸುತ್ತಿರುವುದು, ಮತ್ತು ಇದೀಗ ಮೈಕೋ ಯೂನಿಯನ್ ಆಫೀಸನ್ನು ಕಾಂಗೈ ಗೂಂಡಾಗಳು ಬಲಾತ್ಕಾರದಿಂದ ಸ್ವಾಧೀನಪಡಿಸಿಕೊಂಡಿರುವುದು, ನಗರದ ಸುಭಾಷ್‌ನಗರ ಮೈದಾನದಲ್ಲಿರುವ ಕಾಂಗ್ರೆಸ್ (ಯು) ಕಛೇರಿಯನ್ನು ಕಾಂಗೈಯವರು ಬಲಾತ್ಕಾರದಿಂದ ಸ್ವಾಧೀನಪಡಿಸಿದ್ದು ಇವೆಲ್ಲವೂ ಮುಂದೆ ಬರಬಹುದಾದ ಘಟನೆಗಳ ಬಗ್ಗೆ ಸೂಚಕವಾಗಿವೆ. ಸಮರಶೀಲ ಕಾರ್ಮಿಕ ಸಂಘಟನೆ ಮತ್ತು ಚಳುವಳಿ ಹಾಗೂ ವಿರೋಧ ಪಕ್ಷಗಳನ್ನು ಬಗ್ಗುಬಡಿಯಲು ಉಪಯೋಗಿಸುತ್ತಲಿರುವ ಫ್ಯಾಸಿಸ್ಟ್ ಮಾದರಿಯ ಧಾಳಿಗಳನ್ನು ಆಕಸ್ಮಿಕ ಘಟನೆಗಳೆಂದು ಪರಿಗಣಿಸುವಂತಿಲ್ಲ. ಇವೆಲ್ಲವುಗಳೂ ಪೂರ್ವಯೋಜಿತವಾಗಿದ್ದು, ಸರಕಾರ ಮತ್ತು ಪೋಲೀಸು ಯಂತ್ರದ ಸಹಾಯದಿಂದ ಕ್ರಮಬದ್ಧವಾಗಿ ಜಾರಿಯಾಗುತ್ತಿರುವುದು ಕಂಡುಬರುತ್ತಿದೆ.

ಈ ಮೇಲಿನ ಎಲ್ಲಾ ಘಟನೆಗಳ ಸಂದರ್ಭದಲ್ಲೂ ಪೋಲೀಸರು ಮೂಕ ಪ್ರೇಕ್ಷಕರಂತೆ ಇದ್ದರು. ಅಥವಾ ಆಕ್ರಮಣಕ್ಕೆ ಒಳಗಾದವರಮೇಲೆಯೇ ಜಬರದಸ್ತು ಮಾಡಿದರು; ನಿರಪರಾಧಿಗಳ ಮೇಲೆ ಸುಳ್ಳು ಮೊಕದ್ದಮೆಗಳನ್ನು ದಾಖಲು ಮಾಡಿರುವರು. ಪೋಲೀಸರು ಹೀಗೆ ವರ್ತಿಸಿರುವುದು ಅವರ ಅಸಮರ್ಥತೆಯಿಂದಲಾಗಿ ಅಲ್ಲ. ಬದಲು ಪೋಲೀಸರು ಆಳುವ ಪಕ್ಷವು ನಡೆಸುವ ಫ್ಯಾಸಿಸ್ಟ್ ಧಾಳಿಗಳಿಗೆ ಬೆಂಬಲವೀಯುವಂತೆ ಆಡಳಿತದಲ್ಲಿರುವವರು ಮಾಡಿಕೊಂಡಿರುವುದರಿಂದಲೇ ಹೀಗಾಗಿದೆ.

ಕಾಂಗೈ ಮತ್ತು ಅದರ ಕಾರ್ಮಿಕ ಸಂಘಟನೆಯ ಮುಖಂಡತ್ವಕ್ಕೆ ಧೈರ್ಯವಿದ್ದಲ್ಲಿ ಮತ್ತು ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿದ್ದಲ್ಲಿ, ಗೂಂಡಾಗಿರಿ ನಡೆಸುವುದರ ಬದಲು ಕಾರ್ಮಿಕರನ್ನು ಮತ್ತು ಜನತೆಯನ್ನು ಎದುರಿಸಲಿ. ಮೈಕೋ ಉದಾಹರಣೆಯನ್ನು ತೆಗೆದುಕೊಳ್ಳೋಣ. ಮೈಕೋ ಕಾರ್ಮಿಕರು ತಮ್ಮ ಸರ್ವಸದಸ್ಯರ ಸಭೆಯನ್ನು ನಡೆಸಿ, ತಮ್ಮ ತೀರ್ಮಾನವನ್ನು ಮಾಡಲು ಇಂಟಕ್ (ಐ) ನವರು ಬಿಡಲಿ; ಆದರೆ ತಮ್ಮ ಗತಿ ಏನಾಗುವುದೆಂದು ಗೊತ್ತಿರುವುದರಿಂದ ಇದು ಅವರಿಗೆ ಬೇಕಾಗಿಲ್ಲ. ಎಲ್ಲರನ್ನೂ ಚಕಿತಗೊಳಿಸುವ ವಿಚಾರವೆಂದರೆ ಪೋಲೀಸರು ಕಾಂಗೈನ ಈ ಫ್ಯಾಸಿಸ್ಟ್ ಕ್ರಮಗಳಿಗೆ ಬೆಂಬಲವಿತ್ತು, ಸರ್ವಸದಸ್ಯರ ಸಭೆ ನಡೆಸಲೂ ಬಿಡದಿರುವುದು; ರಕ್ಷಣೆ ಕೊಡುವುದಕ್ಕೆ ಬದಲು, ಗಲಾಟೆಯಾಗುವುದೆಂಬ ನೆಪದಲ್ಲಿ ಸರ್ವಸದಸ್ಯರ ಸಭೆಗೆ ಪೋಲೀಸರೇ ಅಡ್ಡಿಮಾಡುತ್ತಾ ಬಂದಿರುವರು.

ಪೋಲೀಸರು ಸಮಾಜ ವಿರೋಧಿ ವ್ಯಕ್ತಿಗಳನ್ನು ಬಂಧಿಸಿ, ಮೀಟಿಂಗು ನಡೆಸಲು ಬರಬೇಕು. ಆದರೆ ಮೇಲಿನಿಂದ ಹೀಗೆ ಮಾಡದಂತೆ ಆದೇಶ ಬಂದಿರುವುದರಿಂದಲೇ ಪೋಲೀಸರು ಹೀಗೆ ವರ್ತಿಸುತ್ತಿರಬೇಕು. ನಗರದ ಪೋಲೀಸು ಕಮೀಷನರ್‌ರವರು ಮೈಕೋ ಕಾರ್ಮಿಕರ ಮುಖಂಡ ಮತ್ತು ಕಾರ್ಯಕರ್ತರ ಮೇಲೆ ಹೊಣೆಗಾರಿದ ರೀತಿ ದಿಗ್ಭ್ರಮೆಗೊಳಿಸುವಂತಿದೆ. "ಸಾರ್ವಜನಿಕ ಕ್ಷೇತ್ರದ 75,000 ಕಾರ್ಮಿಕರನ್ನು ನಾನು ನೋಡಿಕೊಂಡಿದ್ದೇನೆ. ನಿಮ್ಮ ಮೈಕೋದ 7000 ಕಾರ್ಮಿಕರನ್ನು ಹೇಗೆ ನೋಡಿಕೊಳ್ಳುವುದೆಂದು ನನಗೆ ತಿಳಿದಿದೆ. ನಿಮ್ಮನ್ನೆಲ್ಲಾ ಬಂಧೀಖಾನೆಗೆ ತುಂಬಿ ಹಿಟ್ಟು ಮಾಡಿಬಿಡುತ್ತೇನೆ" ಎಂದು ರಕ್ಷಣೆ ಕೇಳಲು ಹೋದ ಮುಖಂಡರುಗಳಲ್ಲಿ ಪೋಲೀಸು ಕಮೀಷನರ್‌ರವರು ಗುಡುಗಿದ್ದನ್ನು ಹೊರಗೆ ನಿಂತಿದ್ದವರೂ ಕೇಳಿದರು.

ಕಾಂಗ್ರೆಸ್ (ಯು) ಕಛೇರಿಯನ್ನು ಬಲಾತ್ಕಾರವಾಗಿ ಸ್ವಾಧೀನಗೊಳಿಸಿದ್ದನ್ನೇ ವಿಚಾರಿಸೋಣ. ಸ್ಥಳದ ಹಕ್ಕು ಯಾರಿಗೆ ಎಂಬುದರಲ್ಲಿ ವಿವಾದವಿದ್ದಲ್ಲಿ, ಕಾನೂನು ಪ್ರಕಾರವಾಗಿ ಕೋರ್ಟಿನಲ್ಲಿ ನಿರ್ಣಯಿಸಬಹುದಿತ್ತು. ಆಗಲೇ ಕೋರ್ಟಿನಲ್ಲಿ ಕೇಸೂ ಇತ್ತು. ಆದರೆ ಕಾನೂನು ಮತ್ತು ನಿಯಮಗಳಿಗೆ ಏನೇನೂ ಗೌರವ ಕೊಡದೆ ಕಾಂಗೈಯ ಗೂಂಡಾಗಳು ಕಾಂಗ್ರೆಸ್ (ಯು) ಕಛೇರಿಯನ್ನು ಬಲಾತ್ಕಾರವಾಗಿ ಸ್ವಾಧೀನಮಾಡಲು ಯತ್ನಿಸಿದರು. ಇವರ ಮೇಲೆ ಕ್ರಮತೆಗೆದುಕೊಳ್ಳುವುದಕ್ಕೆ ಬದಲು, ಪೋಲೀಸರು ಕೋರ್ಟಿಗೆ ಹೋಗಿ ಕಾಂಗ್ರೆಸ್ (ಯು)ನವರು ಅಲ್ಲಿಗೆ ಹೋಗದಂತೆ ಮಾಡಿರುವುದು ಅತ್ಯಂತ ಸೋಜಿಗ.

ಕಾಂಗೈ ಯುವಕ ಮುಂದಾಳು ಹರಿಪ್ರಸಾದ್ ನೇತೃತ್ವದಲ್ಲಿ, ಎಫ್. ಎಮ್. ಖಾನ್ ಮಾರ್ಗದರ್ಶನದಲ್ಲಿ ಇಂಟಕ್ ಗೂಂಡಾಗಳು ಇದೀಗ ನಗರದ ಬೇರೆಬೇರೆ ಕಾರ್ಮಿಕ ಸಂಘಟನೆಗಳನ್ನು ಹತ್ತಿಕ್ಕಲು ಪ್ರಾರಂಭಿಸಿರುವ ವಾರ್ತೆಗಳು ಬರುತ್ತಲಿದೆ.

ಕಾರ್ಮಿಕ ಸಂಘಟನೆಗಳು ಮತ್ತು ವಿರೋಧ ಪಕ್ಷಗಳವರು ಶಾಂತಿಯುತವಾಗಿ ಪ್ರತಿಭಟಿಸುವಂತೆಯೂ ಇಲ್ಲ. ಏಕೆಂದರೆ ಕಳೆದ ಹಲವಾರು ತಿಂಗಳುಗಳಿಂದ ನಗರದಲ್ಲಿ ಪ್ರತಿಬಂಧಕಾಜ್ಞೆ ಇದೆ. ಆದರೆ ಈ ಪ್ರತಿಬಂಧಕಾಜ್ಞೆಗಳಾವುವೂ ಕಾಂಗೈ ಗೂಂಡಾಗಳ ಮೇಲೆ ಜಾರಿಯಾಗುವಂತಿಲ್ಲ.

ತಾರೀಖು 20-3-1981 ರಂದು ಸಭೆ ಸೇರಿದ್ದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯಸಮಿತಿ ಕಾರ್ಯದರ್ಶಿ ಮಂಡಲಿ (ಸೆಕ್ರೆಟಾರಿಯೆಟ್) ಇವೆಲ್ಲವನ್ನೂ ಬಹಳ ಗಂಭೀರವಾಗಿ ಚರ್ಚಿಸಿದೆ. ಆಳುವ ಪಕ್ಷವು ನಡೆಸುತ್ತಿರುವ ಫ್ಯಾಸಿಸ್ಟ್ ಧಾಳಿಗಳನ್ನು ಉಗ್ರವಾಗಿ ಸೆಕ್ರೆಟಾರಿಯೆಟ್ ಖಂಡಿಸಿದೆ. ಆಳುವ ಪಕ್ಷ ಮತ್ತು ಸರಕಾರವು ಈ ಕೂಡಲೇ ಗೂಂಡಾಗಿರಿಯನ್ನು ನಿಲ್ಲಿಸದಿದ್ದಲ್ಲಿ ಕಾರ್ಮಿಕ ಸಂಘಟನೆಗಳು ಹಾಗೂ ಸಾಮೂಹಿಕ ಸಂಘಟನೆಗಳು ಮತ್ತು ವಿರೋಧ ಪಕ್ಷಗಳು ಜನತೆಯ ಬೆಂಬಲದೊಂದಿಗೆ ತಮ್ಮನ್ನು ತಾವೇ ರಕ್ಷಿಸಿಕೊಳ್ಳುವ ವ್ಯವಸ್ಥೆ ಮಾಡಲೇಬೇಕಾಗುತ್ತದೆ ಎಂಬುದನ್ನು ಸರಕಾರವು ತಿಳಿದಿರಬೇಕು ಎಂದು ಸಿ.ಪಿ.ಐ.(ಎಂ) ಎಚ್ಚರಿಸುತ್ತದೆ. ಹೀಗಾಗಲು ಬಿಟ್ಟಲ್ಲಿ ಬಹಳ ಅಪಾಯಕಾರಿ ಪರಿಸ್ಥಿತಿಯುಂಟಾಗುವುದು ಖಂಡಿತಾ.

ನಾಲ್ಕೂ ಪಕ್ಷಗಳ ನೇತೃತ್ವದ ಕರ್ನಾಟಕ ಪ್ರಗತಿಪರ ಜನತಂತ್ರ ರಂಗದಲ್ಲಿ ಈ ವಿಚಾರಗಳನ್ನೆಲ್ಲಾ ಚರ್ಚಿಸಿ, ಗೂಂಡಾಗಿರಿಯನ್ನು ರಾಜಕೀಯವಾಗಿಯೂ ಹೋರಾಡುವಡೆ ಸಿ.ಪಿ.ಐ.(ಎಂ) ಸೆಕ್ರೆಟಾರಿಯೆಟ್ ಯೋಚಿಸಿದೆ. ಈ ದಿಸೆಯಲ್ಲಿ ರಾಜಕೀಯ ಪಕ್ಷಗಳ ಸಮಾವೇಶ, ರಾಜ್ಯಮಟ್ಟದ ಪ್ರತಿಭಟನಾ ಕಾರ್ಯಕ್ರಮ, ವಿಶಾಲ ತಳಹದಿಯ ವೇದಿಕೆಗಳ ಮೂಲಕ ಕಾರ್ಮಿಕ ಸಂಘಟನಾ ಹಕ್ಕು ಮತ್ತಿತರ ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗಾಗಿ ಹೋರಾಟವನ್ನು ನಡೆಸಬೇಕೆಂದು ಸಿ.ಪಿ.ಐ.(ಎಂ) ಅಭಿಪ್ರಾಯ ಮಾಡಿದೆ.

ಆಡಳಿತ ಪಕ್ಷವು ನಡೆಸುತ್ತಿರುವ ಫ್ಯಾಸಿಸ್ಟ್ ಕ್ರಮಗಳನ್ನು ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಿ ವಿರೋಧಿಸಲು ಸಿ.ಪಿ.ಐ (ಎಂ) ಕರೆ ಈಯುತ್ತಿದೆ. ತಪ್ಪಿತಸ್ಥರು ಯಾರೇ ಇರಲಿ ಅವರ ಮೇಲೆ ಕ್ರಮತೆಗೆದುಕೊಳ್ಳಲಾಗುವುದು ಎಂದು ಸಾರುತ್ತಿರುವ ಮುಖ್ಯಮಂತ್ರಿಯವರು ತಮ್ಮ ಪಕ್ಷದವರೇ ಕಾನೂನನ್ನು ತಮ್ಮ ಕೈಗೆತ್ತಿಕೊಳ್ಳುತ್ತಿರುವಾಗ ಅವರನ್ನು ನಿಯಂತ್ರಿಸಲು ಅಸಾಧ್ಯವಾದರೆ ರಾಜೀನಾಮೆ ನೀಡುವುದೇ ಲೇಸು.

○

ಚರಿತ್ರಾರ್ಹ ಪ್ರಥಮ ಮಹಿಳಾ ಸಮ್ಮೇಳನ

[ಒಂದನೇ ಪುಟದಿಂದ]

ಪರವಾಗಿ ಪ್ರಜಾಸತ್ತಾತ್ಮಕ ಮಹಿಳಾ ಸಂಘದ ಕಾರ್ಯಕ್ರಮದ ವರದಿಯನ್ನು ಓದಿದರು. ಸಂಘದ ಧ್ವಜ, ಸಂವಿಧಾನದ ಧ್ಯೇಯೋದ್ದೇಶಗಳನ್ನು ವಿವರಿಸಿದರು. ರಾಷ್ಟ್ರದ ವಿವಿಧ ಭಾಗಗಳಲ್ಲಿರುವ ಮಹಿಳಾ ಸಂಘಟನೆಗಳ ಸಾಧನೆಗಳನ್ನು ವಿವರಿಸಿದ ಕಾಂ. ಅಹಲ್ಯಾರವರು ವಿಶಾಲವೇದಿಕೆಯ 'ಪ್ರಜಾಸತ್ತಾತ್ಮಕ ಮಹಿಳಾ ಸಂಘ' ಅಸ್ತಿತ್ವಕ್ಕೆ ಬಂದ ಅವಶ್ಯಕತೆಯನ್ನು ಒತ್ತಿ ಹೇಳಿದರು.

ತಮಿಳುನಾಡಿನಲ್ಲಿ 10 ತಿಂಗಳ ಹಿಂದೆ ವರದಕ್ಷಿಣೆಯ ಪಿಡುಗಿನಿಂದಾಗಿ ಪತಿಯಿಂದಕೊಲೆಯಾದ ಸುಪ್ಪಮ್ಮ ಎಂಬ ಹುಡುಗಿಯ ತಾಯಿ ಕಾಂ. ಶಾರದಾ, ವೇದಿಕೆಯ ಮೇಲೆ ಬಂದು ನಡೆದ ಘಟನೆಯನ್ನು ಸವಿಸ್ತಾರವಾಗಿ ವಿವರಿಸಿ, ಸಭೆಯಲ್ಲಿದ್ದ ಹೆಣ್ಣು ಮಕ್ಕಳಿಗೆಲ್ಲಾ ಇಂತಹ ಘಟನೆ ಮುಂದೆ ಆಗದಂತೆ ಹೋರಾಟ ನಡೆಸಬೇಕಾಗಿ ಹೇಳಿದರು. ನಂತರ ರಾಜಕೀಯ ಕೈದಿಗಳಾಗಿ ಮತ್ತು ಪೋಲೀಸ್ ದೌರ್ಜನ್ಯಕ್ಕೆ ಬಲಿಯಾಗಿದ್ದ ಶ್ರೀಮತಿ ಮಾರುತಿ ಮತ್ತು ಶ್ರೀಮತಿ ಉಮಾರವರು ತಮ್ಮ ಅನುಭವಗಳನ್ನು ಕುರಿತು ಮಾತನಾಡಿದರು.

ಭಾರತದ ಮತ್ತು ವಿಶ್ವದ ಮಹಿಳೆಯರ ಸ್ಥಿತಿಗತಿಗಳನ್ನು ಕುರಿತಾದ ಮತ್ತು ಅವರ ಹೋರಾಟವನ್ನು ತೋರಿಸುವಂತಹ ಒಂದು ಉಪಯುಕ್ತವಾದ ವಸ್ತುಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಇದನ್ನು ಉದ್ಘಾಟಿಸಿದ ಪಶ್ಚಿಮ ಬಂಗಾಳದ ಸಮಾಜ ಕಲ್ಯಾಣ ಇಲಾಖೆಯ ಸಚಿವೆ ಕಾಂ. ನಿರುಪಮಾ ಚಟರ್ಜಿಯವರು ಬಂಗಾಲದಲ್ಲಿ ಮಹಿಳೆಯರ ಕಲ್ಯಾಣಕ್ಕೆ ಇರುವ ಉಪಯುಕ್ತ ಯೋಜನೆಗಳನ್ನು ಪರಿಚಯ ಮಾಡಿಕೊಟ್ಟರು ಮತ್ತು ಅಂತಹದನ್ನು ದೊರಕಿಸಿಕೊಳ್ಳುವಲ್ಲಿ ಮಹಿಳಾ ಚಳುವಳಿಗಳ ಪ್ರಾಮುಖ್ಯತೆಯನ್ನು ಒತ್ತಿ ಹೇಳಿದರು.

ಸಮ್ಮೇಳನದಲ್ಲಿ ಭಾಗವಹಿಸಿದ್ದ ಪಶ್ಚಿಮ ಬಂಗಾಳ, ಕೇರಳ, ತಮಿಳುನಾಡು, ತ್ರಿಪುರ, ದೆಹಲಿ, ಪಂಜಾಬ್, ಆಂಧ್ರಪ್ರದೇಶ, ಕರ್ನಾಟಕ, ಉತ್ತರ ಪ್ರದೇಶ, ಬಿಹಾರ, ರಾಜಾಸ್ಥಾನ್, ಮಣಿಪುರ, ಅಸ್ಸಾಂ, ಮಹಾರಾಷ್ಟ್ರ, ಗುಜರಾತ್‌ನ ಪ್ರತಿನಿಧಿಗಳು ತಮ್ಮ ರಾಜ್ಯಗಳಲ್ಲಿನ ಮಹಿಳಾ ಸಂಘಟನೆಯ ಕಾರ್ಯಕ್ರಮದ ವರದಿಯನ್ನು ಓದಿದರು.

ಈ ಸಮ್ಮೇಳನವು ರಾಷ್ಟ್ರದ ಆರ್ಥಿಕ, ಸಾಮಾಜಿಕ, ರಾಜಕೀಯ ಪರಿಸ್ಥಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಒಟ್ಟು 18 ಠರಾವುಗಳನ್ನು ಮಂಡಿಸಿತು. ಮಹಿಳೆಯರಿಗಾಗಿರುವ ಸಾಮಾಜಿಕ ಅನ್ಯಾಯ ಮತ್ತು ನ್ಯಾಯಾಂಗ ಅಸಮಾನತೆ, ದೇವದಾಸಿ ಪದ್ಧತಿ, ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳು, ಮಹಿಳೆಯನ್ನು ಭೋಗವಸ್ತುವಾಗಿ, ಮಾರಾಟದ ವಸ್ತುವಾಗಿ ಮಾಡಿರುವ ಸಂಸ್ಕೃತಿ-ಇವುಗಳನ್ನು ಪ್ರತಿಭಟಿಸಿ ಠರಾವು ಮಂಡಿಸಲಾಯಿತು. ದುಡಿಯುವ ಮಹಿಳೆಯರ ಬೇಡಿಕೆಗಳನ್ನು ಕುರಿತು, ಮಹಿಳಾ ವಿದ್ಯಾಭ್ಯಾಸ, ಅಂತರಾಷ್ಟ್ರೀಯ ಮಹಿಳಾ ದಿನ, ಅಂತರಾಷ್ಟ್ರೀಯ ಅಂಗವಿಕಲರ ವರ್ಷ, ಮಹಿಳಾ ಕಲ್ಯಾಣ ಮತ್ತು ಶಿಶು ಆರೋಗ್ಯ ಕುರಿತು, ಹಳ್ಳಿಗಳಲ್ಲಿ ಬೇಕಾಗುವ ಸೌಕರ್ಯಗಳು, ಏರುತ್ತಿರುವ ದಿನಬಳಕೆಯ ವಸ್ತುಗಳ ಬೆಲೆ, ರಾಷ್ಟ್ರೀಯ ಐಕ್ಯತೆಯನ್ನು ಕುರಿತು, ಅಸ್ಪೃಶ್ಯತೆ ಮತ್ತು ಕೋಮುವಾದಗಳನ್ನು ಕುರಿತು, ಪೌರ ಹಕ್ಕುಗಳನ್ನು ಕುರಿತು ಮತ್ತು ವಾಮಪಂಥೀಯ ಸರ್ಕಾರಗಳಿರುವ ಪಶ್ಚಿಮ ಬಂಗಾಳ, ತ್ರಿಪುರ ಮತ್ತು ಕೇರಳ ಸರ್ಕಾರಗಳಿಗೆ ಶುಭ ಕೋರುವುದರ ಠರಾವುಗಳನ್ನು ಸಭೆಯಲ್ಲಿ ಮಂಡಿಸಲಾಯಿತು ಮತ್ತು ಈ ಠರಾವುಗಳು ಸರ್ವಾನುಮತದಿಂದ ಅಂಗೀಕೃತವಾಗಿ ಸಭೆಯಲ್ಲಿ ನಿರ್ಣಯವನ್ನು ತೆಗೆದುಕೊಳ್ಳಲಾಯಿತು. ಸಮ್ಮೇಳನಕ್ಕೆ ಬಂದ ಪ್ರತಿನಿಧಿಗಳು ಠರಾವುಗಳನ್ನು ಮಂಡಿಸುವಾಗ ಮತ್ತು ಬೆಂಬಲಿಸುವಾಗ ವಿಷಯಗಳನ್ನು ಕುರಿತು ಮಾತನಾಡಿದ್ದು ಉಪಯುಕ್ತ ವಿಷಯ ಚರ್ಚೆಗೆ ಬರುವುದಕ್ಕೆ ಅನುವಾಯಿತು.

ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮಹಿಳಾ ಸಂಘದ ಸಂವಿಧಾನ ಮತ್ತು ಕಾರ್ಯಕ್ರಮಗಳು ಸಭೆಯಲ್ಲಿ ಮಂಡಿಸಲ್ಪಟ್ಟು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಸಮ್ಮೇಳನದ ಕಡೆಯ ದಿನ ಮೆರವಣಿಗೆಯನ್ನು ಏರ್ಪಡಿಸಲಾಗಿತ್ತು. ಮಹಿಳಾ ಪ್ರತಿನಿಧಿಗಳೆಲ್ಲಾ ಇಂದಿನ ವ್ಯವಸ್ಥೆಯ ವಿರುದ್ಧ, ವರ್ಗರಹಿತ ಸಮಾಜದ ಆಶಯಗಳ ಘೋಷಣೆಗಳನ್ನು ಕೂಗುತ್ತಾ ಅಭೂತಪೂರ್ವವಾದ ಮೆರವಣಿಗೆ ಹೊರಟರು. ಮೆರವಣಿಗೆಯ ಕಡೆಗೆ ಸಾರ್ವಜನಿಕ ಸಭೆಯಿದ್ದು, ಬಹಳ ಜನಗಳು ಇದರಲ್ಲಿ ಭಾಗವಹಿಸಿದ್ದು ಪ್ರಜಾಸತ್ತಾತ್ಮಕ ಸಂಘದ ಧ್ಯೇಯೋದ್ದೇಶಗಳನ್ನು ಸಾರ್ವಜನಿಕರಿಗೆ ತಿಳಿಸಲು ಸಾಧ್ಯವಾಯಿತು. ಮೊದಲನೆಯ ದಿನ ಮದ್ರಾಸಿನ ಯೂತ್ ಕ್ವೈರ್‌ನವರಿಂದ ಭಾರತದ ಎಲ್ಲಾ ರಾಜ್ಯಗಳ ಭಾಷೆಗಳ ಕ್ರಾಂತಿಕಾರಿ ಗೀತೆಗಳ ಸಮೂಹಗಾಯನ ಮತ್ತು 2ನೇ ದಿನ 'ಸಮಾಜವಾದಿ ರಾಷ್ಟ್ರಗಳಲ್ಲಿ ಮಹಿಳೆ' ಡಾಕ್ಯುಮೆಂಟರಿ ಚಲನಚಿತ್ರ ಪ್ರದರ್ಶನವಿದ್ದು, ಈ ಸಾಂಸ್ಕೃತಿಕ ಕಾರ್ಯಕ್ರಮವು ಸಮ್ಮೇಳನದ ಉದ್ದೇಶಕ್ಕೆ ಅರ್ಥಪೂರ್ಣವೆನಿಸಿದವು.

ವರದಿ : ಆಶಾ

ಸಂಪಾದಕೀಯ

[ಒಂದನೇ ಪುಟದಿಂದ]

ಆದುದರಿಂದಲೇ ನಮ್ಮ ದೇಶದಲ್ಲಿ ಕೆಲವೊಂದು ಚಾರಿತ್ರಿಕ ಮತ್ತು ಸಾಮಾಜಿಕ ಕಾರಣಗಳಿಂದಲಾಗಿ ತುಳಿತಕ್ಕೊಳಗಾಗಿರುವ ಜನತೆಯನ್ನು ಮುಂದೆ ತರುವ ದೃಷ್ಟಿಯಿಂದ ಮೀಸಲಾತಿ ಪದ್ಧತಿಬೇಕು. ಈ ವಿಭಾಗದ ಜನತೆಗೆ ವಿಶೇಷ ಸವಲತ್ತುಗಳು ಮತ್ತು ರಕ್ಷಣೆ ಸಿಗಲೇಬೇಕು. ಸಮಾಜದಲ್ಲಿ ಆರ್ಥಿಕ-ಸಾಮಾಜಿಕ-ಸಾಂಸ್ಕೃತಿಕ ಸಮಾನತೆಗಳು ಬರುವತನಕವೂ ಇಂತಹ ಪದ್ಧತಿಯು ಬೇಕೆಬೇಕು. ಮುಂದುವರೆದಿರುವ ವಿಭಾಗವು ಇದನ್ನು ಅರಿತು, ಒಂದಿಷ್ಟಾದರೂ ತ್ಯಾಗಮಾಡಲೇಬೇಕು. ನಿರುದ್ಯೋಗದಂತ ಸಮಸ್ಯೆಗೆ ಅಥವಾ ಕಾಲೇಜುಗಳಲ್ಲಿ ಪ್ರವೇಶ ದೊರೆಯದಿದ್ದಲ್ಲಿ ಅವಕ್ಕೆ ಕಾರಣ ಮೀಸಲಾತಿ ಪದ್ಧತಿ ಅಲ್ಲ; ಬದಲು ಬಂಡವಾಳಶಾಹಿ ವ್ಯವಸ್ಥೆ ಎಂಬುದನ್ನು ಇವರು ತಿಳಿದಿರಬೇಕು. ಆದುದರಿಂದ ಎಲ್ಲರಿಗೂ ವಿದ್ಯೆ ಮತ್ತು ಉದ್ಯೋಗದ ಭರವಸೆ ಇರುವಂತಹ ಸಮಾಜವಾದಿ ಪದ್ಧತಿಗಾಗಿ, ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಹೋರಾಡಬೇಕೇ ಹೊರತು ಮೀಸಲಾತಿ ವಿರೋಧವಾಗಿ ಅಲ್ಲ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT